ಸಂಪುಟ 01 | ಸಂಚಿಕೆ 187 | ಗುರುವಾರ 4 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1. ಆಕ್ರಮಣಕ್ಕೆ ಒಳಗಾದ ಮುಗ್ಧ ಮಕ್ಕಳ ಅಂತರರಾಷ್ಟ್ರೀಯ ದಿನ

(International Day of Innocent Children Victims of Aggression)
ವಿಶ್ವಸಂಸ್ಥೆಯಿಂದ ಆಚರಿಸಲಾಗುವ ದಿನ.
ಯುದ್ಧ, ಹಿಂಸೆ ಮತ್ತು ದೌರ್ಜನ್ಯದಿಂದ ಬಾಧಿತವಾಗುವ ಮಕ್ಕಳ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ.

2. ಪರಿಸರ ದಿನದ ಮುನ್ನಾದಿನ
(World Environment Day Eve)
ಜೂನ್ 5 ರಂದು ವಿಶ್ವ ಪರಿಸರ ದಿನ ಆಚರಿಸಲಾಗುತ್ತದೆ; ಜೂನ್ 4ರಂದು ಪರಿಸರ ಸಂರಕ್ಷಣೆ ಕುರಿತು ಹಲವು ಜಾಗೃತಿ ಕಾರ್ಯಕ್ರಮಗಳು ನಡೆಯುತ್ತವೆ.

## ಸುಭಾಷಿತ

ಧ್ಯಾನ ಹೆಚ್ಚಾದಂತೆ ಜ್ಞಾನ ಹೆಚ್ಚಾಗುವುದು !
ಜ್ಞಾನ ಹೆಚ್ಚಾದಂತೆ ಮೌನ ಹೆಚ್ಚಾಗುವುದು!

– ಬುದ್ಧ

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587


# ಸಿಎಂ ಡಿ.ಕೆ. ಶಿವಕುಮಾರ್‌ರಿಂದ ಮೊದಲ ದಿನವೇ 6 ಬಂಪರ್ ಘೋಷಣೆ

## ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ರಾಜ್ಯದಾದ್ಯಂತ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

◆ ನೈಜ್ಯ ದೇಸೆ ನ್ಯೂಸ್



ಬೆಂಗಳೂರು, ಜೂನ್ 3: ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರು ಮೊದಲ ದಿನವೇ ರಾಜ್ಯದ ಜನತೆಗೆ ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ಘೋಷಿಸಿ ಗಮನ ಸೆಳೆದಿದ್ದಾರೆ. ಮುಖ್ಯಮಂತ್ರಿ ಹುದ್ದೆಯ ಪ್ರಮಾಣವಚನ ಸ್ವೀಕರಿಸಿದ ಬಳಿಕ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ ವಿದ್ಯಾರ್ಥಿಗಳು, ಯುವಕರು, ಗ್ರಾಮೀಣ ಪ್ರದೇಶಗಳು ಹಾಗೂ ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಆರು ಪ್ರಮುಖ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಅದರಲ್ಲೂ ರಾಜ್ಯದ ಎಲ್ಲ ಶಾಲೆ, ಕಾಲೇಜು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆ ಘೋಷಿಸಿರುವುದು ವಿದ್ಯಾರ್ಥಿ ಸಮುದಾಯದಲ್ಲಿ ಭಾರಿ ಸಂತಸ ಮೂಡಿಸಿದೆ. ಈ ಯೋಜನೆಯಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಅನುಕೂಲವಾಗಲಿದ್ದು, ಸಾರಿಗೆ ವೆಚ್ಚದ ಹೊರೆ ಕಡಿಮೆಯಾಗಲಿದೆ.ಮುಖ್ಯಮಂತ್ರಿಗಳು ಘೋಷಿಸಿದ ಮತ್ತೊಂದು ಮಹತ್ವದ ಯೋಜನೆಯೆಂದರೆ ರಾಜ್ಯದಾದ್ಯಂತ 10 ಸಾವಿರ ಭಾರತ್ ಜೋಡೋ ಯುವಕರ ಸಂಘಗಳ ಸ್ಥಾಪನೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸಂಘ ರಚಿಸಿ ಅದಕ್ಕೆ 10 ಲಕ್ಷ ರೂ. ಅನುದಾನ ನೀಡಲು ಸರ್ಕಾರ ತೀರ್ಮಾನಿಸಿದೆ. ಇದರಿಂದ ಗ್ರಾಮೀಣ ಯುವಕರಿಗೆ ನಾಯಕತ್ವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಅವಕಾಶಗಳು ದೊರೆಯಲಿವೆ.ಬೆಂಗಳೂರು ನಗರದಲ್ಲಿ ಜಾರಿಯಲ್ಲಿದ್ದ ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದ್ದಾರೆ. ಇದರಿಂದ ಸಾವಿರಾರು ಆಸ್ತಿ ಮಾಲೀಕರಿಗೆ ಕಾನೂನುಬದ್ಧ ದಾಖಲೆಗಳ ಸೌಲಭ್ಯ ದೊರೆಯಲಿದೆ. ನಗರಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿರುವ ಸರ್ಕಾರ, ಬೆಂಗಳೂರು ರಸ್ತೆ ಅಭಿವೃದ್ಧಿಗೆ 2,000 ಕೋಟಿ ರೂ. ವಿಶೇಷ ಅನುದಾನ ಮೀಸಲಿಟ್ಟಿದೆ. ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಲು ಹಾಗೂ ರಸ್ತೆ ಮೂಲಸೌಕರ್ಯ ಸುಧಾರಿಸಲು ಈ ಅನುದಾನ ಬಳಸಲಾಗುತ್ತದೆ.ಇದರ ಜೊತೆಗೆ ಮೂರು ಅಂತಸ್ತಿನ ಮನೆಗಳಿಗೆ ಓಸಿ (Occupancy Certificate) ವಿನಾಯಿತಿ ನೀಡುವ ನಿರ್ಧಾರ ಹಾಗೂ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸುವುದಾಗಿ ಘೋಷಿಸಲಾಗಿದೆ. ಮೊದಲ ದಿನವೇ ಸರಣಿ ಜನಪರ ಯೋಜನೆಗಳನ್ನು ಘೋಷಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರವು ಅಭಿವೃದ್ಧಿ, ಶಿಕ್ಷಣ ಮತ್ತು ಯುವಜನರ ಸಬಲೀಕರಣಕ್ಕೆ ಆದ್ಯತೆ ನೀಡುವ ಸ್ಪಷ್ಟ ಸಂದೇಶ ರವಾನಿಸಿದೆ. ಈ ಘೋಷಣೆಗಳು ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದ್ದು, ಜನರಲ್ಲಿ ಸರ್ಕಾರದ ಬಗ್ಗೆ ಹೆಚ್ಚಿನ ನಿರೀಕ್ಷೆ ಮೂಡಿಸಿವೆ.



# ಬಡ ಬೀದಿ ಬದಿ ವ್ಯಾಪಾರಿಗಳ ಹೊಟ್ಟೆಗೆ ಹೊಡೆದ ಅಧಿಕಾರಿಗಳು

◆ ನೈಜ್ಯ ದೇಸೆ ನ್ಯೂಸ್





ರಸ್ತೆಯ ಬದಿಗಳಲ್ಲಿ 575ಕ್ಕೂ ಅಧಿಕ ಬೀದಿಬದಿಯ ವ್ಯಾಪಾರಿಗಳು ಪೆಟ್ಟಿಗೆ ಅಂಗಡಿ, ( ಡಬ್ಬ ಅಂಗಡಿ ) ತಳ್ಳೋ ಬಂಡಿಂ-ದಲ್ಲಿ ತರಕಾರಿ, ಹಣ್ಣು-ಹಂಪಲ ಸೇರಿದಂತೆ ವ್ಯಾಪಾರ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ. ಕಾನೂನೂ ಕ್ರಮಗಳಂತೆ ತೆರವು ಮಾಡದೇ ಬಡ ವ್ಯಾಪಾರಿಗಳ ಹೊಟ್ಟೆಗೆ ಅಧಿಕಾರಿಗಳು ಹೊಡೆದಿದ್ದಾರೆ ಎಂದು ಆರ್ ಮಾನಸಯ್ಯ ಕಿಡಿಕಾರಿದರು.ಅವರಿಂದು ಪಟ್ಟಣದ ಪುರಸಭೆ ಕಾರ್ಯಾಲಯದ ಮುಂದೆ ಕಲ್ಯಾಣ ಕರ್ನಾಟಕ ಬೀದಿ ಬದಿ ಮಾರಾಟಗಾರರ ಸಂಘದಿಂದ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪುರಸಭೆ ಆಡಳಿತ ಉಳ್ಳವರಿಗೆ ಒಂದು ಕಾನೂನು ಬಡಬಗ್ಗರಿಗೆ ಇನ್ನೊಂದು ಕಾನೂನು ಎಂದು ತಾರತಮ್ಯ ಮಾಡುತ್ತಿದ್ದಾರೆ . ರಸ್ತೆಯನ್ನು ಅತಿಕ್ರಮಿಸಿ ನಿರ್ಮಿಸಿಕೊಂಡ ಬೃಹತ್ ಕಟ್ಟಡಗಳ ತೆರವು ಮಾಡದೇ ಬಡ ವ್ಯಾಪಾರಿಗಳ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಡುತ್ತಿದೆ. ಸುಪ್ರೀಂ ಕೋರ್ಟಿನ ನಿಯಮಗಳ ಉಲ್ಲಂಘನೆ ಮಾಡಿ ಸಹಾಯಕ ಆಯುಕ್ತರ ಹಾಗೂ ಪುರಸಭೆ ಅಧಿಕಾರಿಗಳ ಅಹಂನಿಂದ ನಡೆದು ಕೊಂಡಿದ್ದಾರೆ. ಕೂಡಲೇ ಪಟ್ಟಣದಲ್ಲಿನ ರಸ್ತೆಗಳಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡಗಳ ತೆರವು ಮಾಡಬೇಕು ಅಲ್ಲದೇ ಬೀದಿ ಬದಿಯಲ್ಲಿ ವ್ಯಾಪಾರ ಮಾಡಲು ಮುತ್ತ ಅವಕಾಶ ನೀಡಬೇಕೆಂದು ಗುಡುಗಿದರು. ಅಲ್ಲದೇ ಬೀದಿಬದಿಯ ಮಾರಾಟಗಾರರ ಅಕ್ರಮ ತೆರವು ಮಾಡಲಾಗಿದೆ ಎಂದು ಆಡಳಿತಕ್ಕೆ ಪ್ರಶ್ನೆಗಳನ್ನು ಎಸೆದಾಗ ಸಪ್ಪು ಮೋರೆ ಹಾಕಿಕೊಂಡು ಕುಳಿತ ಮುಖ್ಯಾಧಿಕಾರಿ ನಟರಾಜ ಬೀದಿ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಲು ಯಾವುದೇ ಆದೇಶಗಳು ಇಲ್ಲ ವ್ಯಾಪಾರಿಗಳು ಮೂಲ ಸ್ಥಾನದಲ್ಲಿ ಮತ್ತೆ ವ್ಯಾಪಾರ ಮಾಡಬಹುದೆಂದು ಭರವಸೆ ನೀಡಿದರು. ಇದಕ್ಕೆ ಒಪ್ಪದ ಹೋರಾಟಗಾರರು ಧರಣಿ ಸ್ಥಳಕ್ಕೆ ಸಹಾಯಕ ಆಯುಕ್ತರು ಆಗಮಿಸಿ ಬಡ ಜನರ ಅಹವಾಲು ಆಲಿಸಬೇಕು ಈ ಕೂಡಲೇ ಮುಖ್ಯ ರಸ್ತೆ ಅತಿಕ್ರಮಿಸಿ ನಿರ್ಮಿಸಿದ ಕಟ್ಟಡಗಳನ್ನು ಸರ್ವೆ ಮಾಡಿ ಇಂದಿನಿಂದಲೇ ಆಕ್ರಮ ಕಟ್ಟಡಗಳ ತೆರವು ಮಾಡಬೇಕೆಂದು ಆಗ್ರಹಿಸಿದರು. ಶಾಸಕ ಮಾನಪ್ಪ ವಜ್ಜಲ್ ಬೀದಿಯಲ್ಲಿ ಕುಳಿತು ಐಪಿಎಲ್ ಕ್ರಿಕೆಟ್ ಪಂದ್ಯ ವೀಕ್ಷಣೆ ಮಾಡುತ್ತಾರೆ. ಐ ಪಿ ಎಲ್ ಜೊತೆಗೆ ಬೀದಿ ಬದಿಯಲ್ಲಿ ಬದುಕು ಸಾಗಿಸುವ ಬಿಪಿಎಲ್ ಜನರ ಕಷ್ಟಗಳನ್ನು ಆಲಿಸಬೇಕಿತ್ತು. ಆದರೆ ಇಲ್ಲಿಯ ರಾಜಕೀಯ ನಾಯಕರು ಬೀದಿ ಬದಿಯ ಅತಿಕ್ರಮಿಸಿ ಕಟ್ಟಡಗಳ ನಿರ್ಮಿಸಿದ್ದ-ರಿಂದ ಇವರಿಗೆ ಬಡ ಜನರ ಕಾಳಜಿ ಬೇಕಿಲ್ಲ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಗುರುಸ್ವಾಮಿ ತಾತ ಗಡವಡಿಕೀಶನ ಮಠ ಯಲಗಟ್ಟಿ ಎಂ.ಗಂಗಾಧರ, ಹನುಮಂತಪ್ಪ ಕುಣೆಕೆಲ್ಲೂರು, ಅಮರಯ್ಯ ಗಂಟಿ, ಹಸ್ಮಾತ್ , ಆದೇಶ ನಗನೂರು, ಬಸವರಾಜ ನಾಯಕ, ಚಿದಾನಂದ ಕಸಬಾ ಲಿಂಗಸಗೂರು, ನಾಗರಾಜ ತಿಪ್ಪಣ್ಣ, ರಮೇಶ ನಾಯಕ, ಮಹಿಬೂಬ, ಬಾಬ ಜಾನಿ , ತಿಪ್ಪಮ್ಮ, ಕುಪ್ಪಮ್ಮ, ಹನುಮಮ್ಮ ಸಂಗಮ್ಮ ಸೇರಿದಂತೆ ಬೀದಿ ಬದಿ ವ್ಯಾಪಾರಸ್ಥರು ಪಾಲ್ಗೊಂಡಿದ್ದರು

# ಪೆಟ್ರೋಲ್, ಡೀಸೆಲ್ ಸಾಕಷ್ಟು ದಾಸ್ತಾನು ಲಭ್ಯ : ತಹಶೀಲ್ದಾರ್ ವರ್ಮಾ

◆ ನೈಜ್ಯ ದೇಸೆ ನ್ಯೂಸ್




ರಾಯಚೂರು ಜೂನ್ 03 (ಕರ್ನಾಟಕ ವಾರ್ತೆ): ರಾಯಚೂರು ತಾಲೂಕಿನಾದ್ಯಂತಹ ಪೆಟ್ರೋಲ್ ಬಂಕ್‌ಗಳಲ್ಲಿ ಹಾಗೂ ಗ್ಯಾಸ್ ಏಜೆನ್ಸಿಗಳಲ್ಲಿ ಸಾಕಷ್ಟು ಮಟ್ಟದ ದಾಸ್ತಾನು ಸೌಲಭ್ಯವಿದ್ದು, ಸಾರ್ವಜನಿಕರು, ಗ್ರಾಹಕರು, ವಾಹನ ಮಾಲೀಕರು ಯಾವುದೇ ರೀತಿಯಾಗಿ ಆತಂಕ ಪಡೆದಂತೆ ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ತಿಳಿಸಿದ್ದಾರೆ.ಯಾರಾದರೂ ಪೆಟ್ರೋಲ್, ಡೀಸೆಲ್ ಬಂಕ್ ಅಥವಾ ಗ್ಯಾಸ ಏಜೇನ್ಸಿ ಮಾಲಿಕರು ಅಥ-'ವಾ ವಿತರಕರು ಎಲ್.ಪಿ.ಜಿ ಗ್ಯಾಸ್, ಪೆಟ್ರೋಲ್ ಅಥವಾ ಡೀಸೆಲ್ಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡಿದಲ್ಲಿ ಏಜೇನ್ಸಿ ಮಾಲಿಕರು ಅಥವಾ ವಿತರಕರ ವಿರುದ್ದ ಶಿಸ್ತು ಕ್ರಮ ಕೈಗೊಂಡು ಮಾರಾಟ ಪರವಾನಗಿಯನ್ನು ರದ್ದು ಮಾಡಲಾಗುವುದು.ಪೆಟ್ರೋಲ್ ಬಂಕ್ ಅಥವಾ ಗ್ಯಾಸ್ ಏಜೇನ್ಸಿ ಮಾಲಿಕರು/ವಿತರಕರು ನೋ ಸ್ಟಾಕ್ ಎಂದು ಬಿತ್ತಿ ಪತ್ರವನ್ನು ಅಂಟಿಸಬಾರದು. ಮುಂಜಾಗ್ರತವಾಗಿ ದಾಸ್ತಾನು ಸಂಗ್ರಹಣೆಯನ್ನು ಪರಿಗಣಿಸಿ ಎಲ್.ಪಿ.ಜಿ ಗ್ಯಾಸ್/ ಪೆಟ್ರೋಲ್, ಡೀಸೆಲ್ ಖರೀದಿ ಮಾಡಿ ಸಾರ್ವಜನೀಕರಿಗೆ ಮಾರಾಟ ಮಾಡುವುದು.ಪೆಟ್ರೋಲ್ ಅಥವಾ ಡೀಸೆಲ್ ನಲ್ಲಿ ಯಾವುದೇ ರೀತಿ ಅಭಾವ ಇರುವುದಿಲ್ಲ. ಯಾವುದೇ ರೀತಿಯಾಗಿ ಕೃತಕವಾಗಿ ಅಭಾವ ಸೃಷ್ಟಿಸುವ ಸಾಮಾಜಿಕ ಜಾಲತಾಣದಲ್ಲಿ ಬರುವಂತಹ ಸಂದೇಶಗಳಿಗೆ ಕಿವಿಕೊಡದೇ ನಿಶ್ಚಿಂತೆಯಾಗಿ ಇರಬೇಕೆಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಸಮರ್ಪಕ ವಿದ್ಯುತ್ 7 ದಿನಗಳಲ್ಲಿ ಸಮಸ್ಯೆ ಬಗೆಹರಿಸದಿದ್ದರೆ ಕಠಿಣ ಕ್ರಮ : ಶಾಸಕ ಮಾನಪ್ಪ ವಜ್ಜಲ್

◆ ನೈಜ್ಯ ದೇಸೆ ನ್ಯೂಸ್



ತಾಲೂಕಿನಾದ್ಯಂತ ನಿರಂತರ ವಿದ್ಯುತ್ ವ್ಯತ್ಯಯ, ಕಡಿಮೆ ವೋಲ್ವೇಜ್ ಸಮಸ್ಯೆ ಹಾಗೂ ಜನರ ದೂರುಗಳಿಗೆ ಸ್ಪಂದಿಸದ ಜೆಸ್ಕಾಂ ಅಧಿಕಾರಿಗಳ ವಿರುದ್ಧ ಶಾಸಕ ಮಾನಪ್ಪ ವಜ್ಜಲ್ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅವರಿಂದು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ವಿದ್ಯುತ್ ಕುಂದುಕೊರತೆಗಳ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ದಿನನಿತ್ಯ ಹತ್ತ ರಿಂದ ಹದಿನೈದು ಬಾರಿ ವಿದ್ಯುತ್ ಕಡಿತವಾಗುತ್ತಿರುವ ಬಗ್ಗೆ ಗಂಭೀರ ಅಸಮಾಧಾನ ವ್ಯಕ್ತಪಡಿಸಿದರು. ವಿದ್ಯುತ್ ಸಮಸ್ಯೆಯಿಂದ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಜನರು ತಮ್ಮ ಸಮಸ್ಯೆಗಳನ್ನು ತಿಳಿಸಲು ಅಧಿಕಾರಿಗಳಿಗೆ ಕರೆ ಮಾಡಿದಾಗ ಫೋನ್ ಸ್ವಿಚ್ ಆಫ್ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಇದು ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಅಧಿಕಾರಿಗಳು ತೋರಿಸುತ್ತಿರುವ ಬೇಜವಬ್ದಾರಿ ಧೋರಣೆಯನ್ನು ತೋರಿಸುತ್ತದೆ ಎಂದರು. ಲಿಂಗಸಗೂರು ಮೀಸಲು ಕ್ಷೇತ್ರ ಎಂಬ ಕಾರಣಕ್ಕೆ ತಾಲೂಕಿನ ಜನರ ಸಮಸ್ಯೆಗಳನ್ನು ಕಡೆಗಣಿಸಲಾಗುತ್ತಿದೆಯೇ? ಅಧಿಕಾರಿಗಳಿಗೆ ಜನರ ಕಷ್ಟಗಳ ಬಗ್ಗೆ ಯಾವುದೇ ಕಾಳಜಿ ಇಲ್ಲದಂತಾಗಿದೆ. ವಿದ್ಯುತ್ ವ್ಯತ್ಯಯಕ್ಕೆ ಕಾರಣವೇನು ಎಂಬ ಸ್ಪಷ್ಟ ಮಾಹಿತಿಯೂ ಇಲ್ಲದಿರುವುದು ಅತ್ಯಂತ ವಿಷಾದನೀಯ ಎಂದು ಜೆಸ್ಕಾಂ ಎಇಇ ಬನ್ನಪ್ಪ ಕರಿಬಂಟನಾಳ ಅವರನ್ನು ತರಾಟೆಗೆ ತೆಗೆದುಕೊಂಡರು ಸಭೆಯಲ್ಲಿ ಲಿಂಗಸಗೂರು, ಹಟ್ಟಿ, ಮುದುಗಲ್ ಸೇರಿದಂತೆ ವಿವಿಧ ಗ್ರಾಮಗಳು, ತಾಂಡಾಗಳು ಹಾಗೂ ದೊಡ್ಡಿಗಳಲ್ಲಿ ಎದುರಾಗುತ್ತಿರುವ ವಿದ್ಯುತ್ ಸಮಸ್ಯೆಗಳ ಕುರಿತು ಶಾಸಕರು ಅಧಿಕಾರಿಗಳಿಗೆ ಸರಣಿ ಪ್ರಶ್ನೆಗಳನ್ನು ಕೇಳಿದರು. ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿವರ್ತಕಗಳ ಸಂಖ್ಯೆ, ಅವಧಿ ಮೀರಿರುವ ಪರಿವರ್ತಕಗಳ ವಿವರ, ಹೊಸ ಪರಿವರ್ತಕಗಳ ಪೂರೈಕೆ, ಕಡಿಮೆ ವೋಲ್ವೇಜ್ ಸಮಸ್ಯೆಯ ಕಾರಣಗಳು ಹಾಗೂ ಪರಿಹಾರ ಕ್ರಮಗಳ ಕುರಿತು ಮಾಹಿತಿ ಕೇಳಿದಾಗ ಅಧಿಕಾರಿಗಳು ಸಮರ್ಪಕ ಉತ್ತರ ನೀಡಲು ವಿಫಲರಾದರು. ಇದರಿಂದ ಮತ್ತಷ್ಟು ಅಸಮಾಧಾನ ಗೊಂಡ ಶಾಸಕ ವಜ್ಜಲ್, ಜನರ ಸಮಸ್ಯೆಗಳ ಬಗ್ಗೆ ಸಭೆ ಕರೆದರೆ ಅಗತ್ಯ ಮಾಹಿತಿಯೇ ಇಲ್ಲ ಎಂದು ಹೇಳುವುದು ಅಕ್ಷಮ್ಯ. ಈ ರೀತಿಯ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನವನ್ನು ಸಹಿಸಲು ಸಾಧ್ಯವಿಲ್ಲ. ಜನರು ಅಧಿಕಾರಿಗಳ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ" ಎಂದು ಕಿಡಿಕಾರಿದರು. ತಾಲೂಕಿನ ವಿದ್ಯುತ್ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿ, ಇಂದಿನಿಂದ ಏಳು ದಿನಗಳೊಳಗೆ ಸಮರ್ಪಕ ವಿದ್ಯುತ್ ಸರಬರಾಜು ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ದ ಸೂಕ್ತ ಹಾಗೂ ಕಠಿಣ ಕ್ರಮ ಕೈಗೊಳ್ಳುವಂತೆ ಮೇಲಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಜನರ ಸಹನೆಗೂ ಒಂದು ಮಿತಿ ಇದೆ. ವಿದ್ಯುತ್ ಸಮಸ್ಯೆಗಳನ್ನು ತಕ್ಷಣ ಪರಿಹರಿಸಿ, ಇಲ್ಲವೇ ಕ್ರಮ ಎದುರಿಸಲು ಸಿದ್ದರಾಗಿ ಎಂಬ ಶಾಸಕ ಮಾನಪ್ಪ ವಜ್ಜಲ್ ಅವರ ಎಚ್ಚರಿಕೆ ಸಭೆಯ ಪ್ರಮುಖ ವಿಷಯವಾಗಿ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಮುಖ್ಯ ಅಧಿಕಾರಿ ಉಮೇಶ್, ಜೆಸ್ಕಾಂ ಅಧೀಕ್ಷಕ ಎಂಜಿನಿಯರ್ ವೆಂಕಟೇಶ್, ಎಇಇ ಬನ್ನಪ್ಪ ಕರಿಬಂಟನಾಳ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಲೈಮನ್‌ಗಳು ಉಪಸ್ಥಿತರಿದ್ದರು

## ಸಾಹಿತ್ಯ ಸಿಂಚನ

ಕಲೆ
ಬಣ್ಣಗಳ ಮಾತು ಕೇಳಿದಾಗ
ಮನಸೇ ಚಿತ್ರವಾಗುತ್ತದೆ,
ಭಾವನೆಗಳ ತುಂತುರು ಬೀಳುವಾಗ
ಕಲೆ ಜೀವಂತವಾಗುತ್ತದೆ.

ಕಾಗದದ ಮೇಲೆ ರೇಖೆ ಬರೆದರೆ
ಕೇವಲ ಗೆರೆ ಅಲ್ಲ ಅದು,
ಹೃದಯದೊಳಗಿನ ಕನಸುಗಳು
ರೂಪ ಪಡೆದ ಕಥೆ ಅದು.

ನೃತ್ಯದ ಹೆಜ್ಜೆಯಲ್ಲಿ ನಾದವಿದೆ,
ಸಂಗೀತದಲ್ಲಿ ಆತ್ಮದ ಸ್ಪರ್ಶ,
ಕಲೆಯಿಲ್ಲದ ಜೀವನವೆಂದರೆ
ಬಣ್ಣವಿಲ್ಲದ ನಿಶ್ಶಬ್ದ ದರ್ಶನ.

ಕಲೆ ಎಂದರೆ ಆತ್ಮದ ಭಾಷೆ,
ಮಾತಿಲ್ಲದೆ ಹೇಳುವ ಕಥೆ,
ಮಾನವನ ಹೃದಯದೊಳಗಿರುವ
ಅಮರ ಸೌಂದರ್ಯದ ಪಥವೇ ಕಲೆ.

– ರಮೇಶ್

## ಪೆಟ್ರೋಲ್, ಡೀಸೆಲ್, ಸಿ.ಎನ್.ಜಿ. ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಸಿಂಧನೂರಿನಲ್ಲಿ ಸೌದೆ ಒಲೆಯಲ್ಲಿ ಟೀ ತಯಾರಿಸಿ ವಿನೂತನ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್




ಕೇಂದ್ರ ಸರ್ಕಾರ ಪೆಟ್ರೋಲ್,ಡೀಸೆಲ್,CNG ಹಾಗೂ ಅಡುಗೆ ಅನಿಲದ ನಿರಂತರ ಬೆಲೆ ಏರಿಕೆ ಮಾಡುತ್ತಿರುವುದನ್ನು ಖಂಡಿಸಿ ಭಗತ್ ಸಿಂಗ್ ಆಟೋ ಚಾಲಕರ ಸಂಘ ಹಾಗೂ ಎಐಸಿಸಿಟಿಯು ಸರ್ಕಾರ ಕೂಡಲೇ ಬೆಲೆ ಏರಿಕೆ ನಿರ್ಧಾರ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಕೇಂದ್ರ ಮೋದಿ ಸರ್ಕಾರದ ವಿರುದ್ಧ ಘೋಷಣೆ ಮೂಲಕ ಆಕ್ರೋಶ ವ್ಯಕ್ತಪಡಿಸಲಾಯಿತು ಈ ಸಂದರ್ಭದಲ್ಲಿ ಭಗತ್ ಸಿಂಗ್ ಆಟೋ ಚಾಲಕರ ಸಂಘದ ಗೌರವ ಅಧ್ಯಕ್ಷರಾದ ನಾಗರಾಜ್ ಪೂಜಾರಿ ಬಸವರಾಜ್ ಕೊಂಡೆ ಅಧ್ಯಕ್ಷರು. ಶಕ್ಷವಲಿ ಪ್ರಧಾನ ಕಾರ್ಯದರ್ಶಿಗಳು ಖಾಜಾಹುಸೇನ್ ಬಸವರಾಜ್ ಶೌಕತ್ ಅಲಿ ಬಸವರಾಜ್ ಮತ್ತು ಭಗತ್ ಸಿಂಗ್ ಆಟೋ ಚಾಲಕರ ಸಂಘದ ಸದಸ್ಯರು ಮತ್ತು ಅನೇಕ ಉಪಸ್ಥಿತರು ಭಾಗಿಯಾಗಿದ್ದರು

## ಹಂಚಿನಾಳ (ಯು) ಕ್ಯಾಂಪಿನ ಗ್ರಾಮದ ನಿವಾಸಿಗಳಿಗೆ ಸ್ಮಶಾನ ಭೂಮಿ ಮಂಜೂರಿಗೆ ಒತ್ತಾಯ

ನೈಜ್ಯ ದೆಸೆ ನ್ಯೂಸ್




ಮಸ್ಕಿ: ತಾಲೂಕಿನ ಹಂಚಿನಾಳ (ಯು) ಕ್ಯಾಂಪಿನ ನಿವಾಸಿಗಳಿಗೆ ಸ್ಮಶಾನ ಭೂಮಿ ಮಂಜೂರು ಮಾಡುವಂತೆ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ತಹಸೀಲ್ದಾರ್ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು. ಗುಡದೂರು ಹೋಬಳಿಯ, ಗುಡಗಲದಿನ್ನಿ ಸೀಮೆಯ ಸರ್ವೆ ನಂ.16ರಲ್ಲಿ 04 ಎಕರೆ ಸರಕಾರಿ ಜಮೀನು ಇದ್ದು ಇದರಲ್ಲಿ 01 ಎಕರೆ ಜಮೀನನ್ನು ಹಂಚಿನಾಳ ಕ್ಯಾಂಪ್(ಯು) ನಿವಾಸಿಗಳಿಗೆ ಸ್ಮಶಾನ ಮೀಸಲಿಡಬೇಕೆಂದರು. ಸುಮಾರು ವರ್ಷಗಳಿಂದ ಹಂಚಿನಾಳ ಕ್ಯಾಂಪಿನಲ್ಲಿ ವಾಸ ಮಾಡುತ್ತಿದ್ದು, ನಮ್ಮ ಕ್ಯಾಂಪ್‌ಗೆ ಸ್ಮಶಾನ ಭೂಮಿ ಇಲ್ಲದೇ ಇರುವದರಿಂದ ನಮ್ಮ ಕ್ಯಾಂಪಿನ ಸಾರ್ವಜನಿಕರ ಕುಟುಂಬ ಯಾರೇ ಸದಸ್ಯರು ಮೃತಪಟ್ಟಲ್ಲಿ ಶವ ಸಂಸ್ಕಾರಕ್ಕಾಗಿ ಪಕ್ಕದ ಊರಿನ ಸ್ಮಶಾನ ಶವ ಸಂಸ್ಕಾರ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.ಈ ಬಗ್ಗೆ ಸುಮಾರು ವರ್ಷಗಳಿಂದ ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿದ್ದೇವೆ. ತಹಶೀಲ್ದಾರರ ಆದೇಶದ ಮೇರೆಗೆ ಕಂದಾಯ ನಿರೀಕ್ಷಕರು, ಗುಡದೂರು, ಗ್ರಾಮಲೇಕ್ಕಿಗರು, ಭೂ ಮಾಪನ ಅಧಿಕಾರಿಗಳ ಗುಡದೂರು ಹೋಬಳಿಯ, ಗುಡಗಲದಿನ್ನಿ ಸೀಮೆಯ ಸರ್ವೆ ನಂ.16 ರಲ್ಲಿ 01 ಎಕರೆ ಭೂಮಿಯನ್ನು ಹಂಚಿನಾಳ ಕ್ಯಾಂಪ್ (ಯು) ಸಾರ್ವಜನಿಕರ ಸ್ಮಶಾನಕ್ಕಾಗಿ ಭೂಮಿಯನ್ನು ಗುರುತಿಸಿ ಹದ್ದು ಬಸ್ತು ಮಾಡಿ ಎಲ್ಲಾ ದಾಖಲೆಗಳನ್ನು ಲಿಂಗಸುಗೂರಿನ ಸಹಾಯಕ ಆಯುಕ್ತರಿಗೆ ಮುಂದಿನ ಆದೇಶಕ್ಕಾಗಿ ವರದಿಯಲ್ಲಿ ಸಲ್ಲಿಸಿರುತ್ತಾರೆ. ಆದ್ದರಿಂದ ಕೂಡಲೇ ಸರ್ವೆ ನಂ.16 ರಲ್ಲಿ 01 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಮಂಜೂರು ಮಾಡಬೇಕೆಂದು ಒತ್ತಾಯಿಸಿದ್ದಾರೆ.ಈ ಸಂದರ್ಭದಲ್ಲಿ ಮಲ್ಲಿಕ್ ಮುರಾರಿ,ಮರಿಸ್ವಾಮಿ ಹಸಮಕಲ್, ವೀರಭದ್ರಗೌಡ, ಈರಪ್ಪ, ಸುಭಾಸಕಡಬೂರು, ರಾಜು, ಬವಸರಾಜ ಸೇರಿದಂತೆ ಹಂಚಿನಾಳ(ಯು) ಕ್ಯಾಂಪಿನ ನಿವಾಸಿಗಳಿದ್ದರು

# ಬೀದಿ ನಾಟಕದ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ – ಎಸ್.ವಸಂತ್

ನೈಜ್ಯ ದೆಸೆ ನ್ಯೂಸ್



ಸಿರುಗುಪ್ಪ – ನಗರದ 2ನೇ ವಾರ್ಡ್‌ನ ಕೊಪ್ಪಳ ಮಸೀದಿ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ಬೀದಿ ನಾಟಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ತಾಲೂಕು ಕ್ಷೇತ್ರ ಯೋಜನಾಧಿಕಾರಿ ಎಸ್. ವಸಂತ್ ಬೀದಿ ನಾಟಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಜ್ವಲಂತ ಕಾರ್ಯಕ್ರಮಗಳು, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ ಅರಿವು ಕಾರ್ಯಕ್ರಮ, ಮಹಿಳೆಯರ ಹಕ್ಕು ಮತ್ತು ಕಾನೂನು, ಸರಕಾರಿ ಯೋಜನೆಗಳು, ನಾನು ಓದಿದ ಪುಸ್ತಕ ವಿಮರ್ಶೆ, ಹೀಗೆ ಮಹಿಳೆಯರಿಗೆ ಅನೇಕ ಮಾಹಿತಿಯ ಕಣಜವನ್ನ ಒದಗಿಸುವಂತಹ ಕೆಲಸವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಮಾತೃಶ್ರೀ ಡಾ. ಹೇಮಾವತಿ ಅಮ್ಮನವರ ಮಾರ್ಗದರ್ಶನದಲ್ಲಿ ಮಾಡುತ್ತಾ ಬರುತ್ತಿದೆ ಅದರೊಟ್ಟಿಗೆ ವಿಶೇಷವಾಗಿ ಸಾರ್ವಜನಿಕರಿಗೆ ಶೌಚಾಲಯ ರಚನೆ ಮತ್ತು ಬಳಕೆ, ಸಾರ್ವಜನಿಕ ಸ್ಥಳಗಳನ್ನು ಶುಚಿಂಯಾಗಿಟ್ಟುಕೊಳ್ಳುವಂಥದ್ದು, ಸಾರ್ವಜನಿಕ ಸ್ಥಳಗಳಾದ ಬಸ್ ಸ್ಟಾಂಡ್, ದೇವಸ್ಥಾನ, ಶಾಲಾ ಆವರಣಗಳನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳುವುದು, ನೀರಾವರಿ ವ್ಯವಸ್ಥೆಗಳಲ್ಲಿ ನೀರಿನ ಮಿತ ಬಳಕೆ ಮತ್ತು ಮುಂದಿನ ಪೀಳಿಗೆಗಾಗಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಈ ಕುರಿತು ಪ್ರಹಸನದ ಮೂಲಕ ಜನರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ತಾಲೂಕಿಗೆ ಎರಡು ಕಾರ್ಯಕ್ರಮದಂತೆ ಇಡೀ ರಾಜ್ಯಾದ್ಯಂತ 500 ಕಾರ್ಯಕ್ರಮಗಳ ಆಯೋಜನೆಗೆ 25 ಲಕ್ಷ ರೂಪಾಯಿ ಅನುದಾನವನ್ನು ಪೂಜ್ಯ ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿರುತ್ತಾರೆ ಎಂದರು.ನಂತರ ಮಾತನಾಡಿದ ಧರ್ಮಗುರುಗಳಾದ ಸಮದ್ ಮೌಲಾನ ರವರು ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೇವಲ ಸಾಲ ನೀಡುವ ಸಂಸ್ಥೆಯಾಗಿರದೆ ಮಹಿಳೆಯರನ್ನು ಒಟ್ಟುಗೂಡಿಸಿ ನಿಮ್ಮ ಮನೆಗಳಲ್ಲಿ ಆರೋಗ್ಯದಿಂದ ಇರಲು ನಿಮಗೋಸ್ಕರ ಬೀದಿ ನಾಟಕದ ಮೂಲಕ ಪರಿಸರದ ಜಾಗೃತಿ, ಚರಂಡಿ ಸ್ವಚ್ಚತೆ, ಹಸಿಕಸ–ಒಣಕಸ ಬೇರ್ಪಡಿಸುವುದು, ಬಾಲ್ಯ ವಿವಾಹದಿಂದ ಆಗುವ ಸಮಸ್ಯೆಗಳ ಬಗ್ಗೆ ಮನ ಮುಟ್ಟುವ ರೀತಿಯಲ್ಲಿ ಬೀದಿ ನಾಟಕಗಳನ್ನು ಆಯೋಜನೆ ಮಾಡಿ ಸಮಾಜ ಪರಿವರ್ತನಗೆ ಶ್ರಮವಹಿಸುತ್ತಿದ್ದಾರೆ, ಇಂತಹ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಜನರಿಗೆ ಕರೆ ನೀಡಿದರು.ಈ ಸಂದರ್ಭ ಜನರಂಗ ಕಲಾ ತಂಡದ ಮುಖ್ಯಸ್ಥರಾದ ಅಶೋಕ ಬಡಿಗೇರ್, ಒಕ್ಕೂಟದ ಅಧ್ಯಕ್ಷರಾದ ಫರ್ಜನ ಬೇಗಂ, ಸಂಪನ್ಮೂಲ ವ್ಯಕ್ತಿ ನರಸಿಂಹ ಮೂರ್ತಿ, ಜ್ಞಾನವಿಕಾಸ ಸಮನ್ವಯಾಧಿಕಾರಿ ಪ್ರೀಯಾ, ವಲಯದ ಮೇಲ್ವಿಚಾರಕಿ ಚಂದ್ರಕಲಾ, ಸೇವಾಪ್ರತಿನಿಧಿ ಶಾಕೀರ, ಲಕ್ಷ್ಮಿ ಹಾಗೂ ಕೇಂದ್ರದ ಸದಸ್ಯರು ಭಾಗವಹಿಸಿದ್ದರು.

# ನಾವೆಲ್ಲಾ ಸಂಘಟಿತರು ಕಾರುಣ್ಯಾಶ್ರಮಕ್ಕೆ ಸ್ವಂತ ಜಾಗ ಕಲ್ಪಿಸುವಲ್ಲಿ ಹೋರಾಡುತ್ತೇವೆ – ಉಮೇಶಗೌಡ ಅರಳಹಳ್ಳಿ

ನೈಜ್ಯ ದೆಸೆ ನ್ಯೂಸ್



ಸಿಂಧನೂರು – ಸುಮಾರು ವರ್ಷಗಳಿಂದ ಅಂಧ–ಅನಾಥರಿಗೆ ಸಾರ್ವಜನಿಕರ ಸಹಾಯ ಸಹಕಾರದೊಂದಿಗೆ ಊಟ ವಸತಿ ಆರೋಗ್ಯ ಆಶ್ರಯ ಕಲ್ಪಿಸಿ ಪ್ರಾಮಾಣಿಕವಾಗಿ ಸೇವೆ ಮಾಡುತ್ತಿರುವ ಕರುಣೆಯ ಕಾರುಣ್ಯ ಕುಟುಂಬಕ್ಕೆ ಸಿಂಧನೂರಿನ ಕನ್ನಡ ಪರ ಹೋರಾಟಗಾರರು ಸದಾವಕಾಲ ಅಶ್ರಮದ ಸೇವೆಯ ಜೊತೆಗಿರುತ್ತೇವೆ. ನಾವೆಲ್ಲಾ ಸಂಘಟಿತರು ಕಾರುಣ್ಯಾಶ್ರಮಕ್ಕೆ ಸ್ವಂತ ಜಾಗ ಕಲ್ಪಿಸುವಲ್ಲಿ ಹೋರಾಡುತ್ತೇವೆ. ಮತ್ತು ಈ ಸಂಸ್ಥೆ ಸಿಂಧನೂರು ತಾಲೂಕಿನ ಯಾವುದೇ ವಿವಿಧ ಸಭೆ ಸಮಾರಂಭಗಳಲ್ಲಿ ಉಳಿದಿರುವ ಆಹಾರವನ್ನು ಶೇಖರಣೆ ಮಾಡಿ ಅವಶ್ಯಕತೆಯಿದ್ದ ಕುಟುಂಬಗಳಿಗೆ ತಲುಪಿಸುವ ಕಾರ್ಯವು ಕೂಡ ಮಾಡುತ್ತಿರುವುದು. ಹಲವಾರು ಯುವಕರಿಗೆ ಈ ಕಾರುಣ್ಯ ಕುಟುಂಬದ ಸೇವೆಗಳು ಸ್ಪೂರ್ತಿಯಾಗಿವೆ. ಎಂದು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ನಡೆದ ಕರವೇ (ಟಿ. ಎ. ನಾರಾಯಣಗೌಡ ಬಣ)ದ ನಗರ ಘಟಕ ಅಧ್ಯಕ್ಷರಾದ ಆರ್. ಎಕ್ಸ್. ಸೂರಿ ಹಾಗೂ ಕರವೇ ಕನ್ನಡ ಸೇನೆಯ ನಗರ ಘಟಕ ಉಪಾಧ್ಯಕ್ಷರಾದ ರೇಣುಕಾ ಸ್ವಾಮಿ ಮತ್ತು ಬೀದಿಬದಿ ವ್ಯಾಪಾರಿಗಳ ಸಂಘದ ಮುಖಂಡರಾದ ಎಚ್. ಭಾಷಾಸಾಬ್ ಇವರುಗಳ ಜನ್ಮದಿನ ಸಮಾರಂಭ ಕಾರ್ಯಕ್ರಮದಲ್ಲಿ ಕರವೇ ರಾಜ್ಯ ಕಾರ್ಯಧ್ಯಕ್ಷರಾದ ಉಮೇಶಗೌಡ ಅರಳಹಳ್ಳಿ ಅವರು ಆಶ್ರಮದ ಸೇವೆಯನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಆರ್. ಎಕ್ಸ್. ಸೂರಿ ಹಾಗೂ ರೇಣುಕಾ ಸ್ವಾಮಿ ಮತ್ತು ಎಚ್.ಭಾಷಾ ಸಾಬ್ ಇವರುಗಳನ್ನು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರು ಸನ್ಮಾನಿಸಿ ಗೌರವಿಸಿ ಶುಭ ಹಾರೈಸಿದರು. ನಂತರ ಕರವೇ ಜಿಲ್ಲಾ ಉಪಾಧ್ಯಕ್ಷರಾದ ದೇವೇಂದ್ರ ಗೌಡ ಮಾತನಾಡಿ ಈ ನಮ್ಮ ಕಾರುಣ್ಯ ಆಶ್ರಮದ ಸೇವೆಯು ರಾಜ್ಯದ ಕರುಣೆಯ ಕುಟುಂಬ ಎಂದೆನಿಸಿಕೊಂಡಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ. ಕಾರುಣ್ಯಾಶ್ರಮಕ್ಕೆ ಸ್ವಂತ ಜಾಗ ಕಲ್ಪಿಸುವಲ್ಲಿ ನಾವುಗಳು ಹೋರಾಟ ಮಾಡಬೇಕಾಗುತ್ತದೆ. ಸಿಂಧನೂರಿನಲ್ಲಿ ಇಬ್ಬರು ಶಾಸಕರು ಈ ಸಂಸ್ಥೆಗೆ ಜಾಗ ಕಲ್ಪಿಸಿಕೊಟ್ಟರೆ ಇನ್ನು ಹೆಚ್ಚಿನ ಸೇವೆ ಮಾಡಲು ಈ ಸಂಸ್ಥೆಗೆ ಅನುಕೂಲವಾಗುತ್ತದೆ. ಕೊರೋನಾದಂತಹ ಸಮಯದಲ್ಲಿಯೂ ಕೂಡ ಕಾರುಣ್ಯಾಶ್ರಮವೂ ನಿರ್ಗತಿಕರಿಗೆ ಅನಾಥರಿಗೆ ಆಶ್ರಯ ನೀಡಿದ್ದನ್ನು ನಾವ್ಯಾರು ಮರೆಯಬಾರದು. ಆದ್ದರಿಂದ ನಮ್ಮ ಚಿಂದಲೂರಿನ ಎಲ್ಲಾ ಕನ್ನಡಪರ ಹೋರಾಟಗಾರರು ಮತ್ತು ಇಂದು ಜನ್ಮದಿನ ಆಚರಿಸಿಕೊಳ್ಳುವಂತಹ ನಮ್ಮ ಸಂಘಟನೆಯ ಎಲ್ಲರೂ ಕಾರುಣ್ಯ ಆಶ್ರಮದ ಸೇವೆಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸೋಣ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎಲ್. ರಾಜಸಾಬ್ ಗಾಂಧಿನಗರ ಕರವೇ ತಾಲೂಕ ಅಧ್ಯಕ್ಷರು. ಬಸವರಾಜ ವಿಶ್ವಕರ್ಮ ತಾಲೂಕ ಉಪಾಧ್ಯಕ್ಷರು. ಬೂದೇಶ ಮರಾಠ ತಾಲೂಕ ಉಪಾಧ್ಯಕ್ಷರು. ಮಂಜುನಾಥ ಗಾಣಿಗೇರ ಕರವೇ ತಾಲೂಕಾಧ್ಯಕ್ಷರು. ಹಾಗೂ ವಿವಿಧ ಕರವೇ ಸಂಘಟನೆಗಳ ಮುಖಂಡರುಗಳಾದ ಅಶೋಕ. ಬೀರಪ್ಪ.. ವೀರೇಶ ಯಾದವ. ಚನ್ನಬಸವ. ಮಲ್ಲಿಕಾರ್ಜುನ ಕುನಟಗಿ. ಸಿದ್ದರಾಮೇಶ. ವಿನೋದ ಕುಮಾರಸ್ವಾಮಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ.ಜ್ಯೋತಿ. ಶರಣು ಸ್ವಾಮಿ ಹಾಗೂ ವಿವಿಧ ಕರವೇ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು

# ಕಾರುಣ್ಯಾಶ್ರಮಕ್ಕೆ ಷ. ಬ್ರ. ಅಭಿನವ ಗಜದಂಡ ಶಿವಾಚಾರ್ಯ ಮಹಾಸ್ವಾಮಿಗಳ ಪಾದಸ್ಪರ್ಶ

ನೈಜ್ಯ ದೆಸೆ ನ್ಯೂಸ್



ಸಿಂಧನೂರು – ಲಿಂಗಸುಗೂರು ತಾಲೂಕಿನ ಸುಕ್ಷೇತ್ರ ಅಮರೇಶ್ವರ ದೇವರ ಗುರುಗಳಾದ ದೇವರಭೂಪೂರ ತೋಪಿನಕಟ್ಟೆ ಸಂಸ್ಥಾನ ಬೃಹನ್ಮಠದ ಷ. ಬ್ರ. ಗಜ ತಂಡ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಪಾದಸ್ಪರ್ಶ ಮಾಡಿ ಆಶ್ರಮದಲ್ಲಿನ ಆಶ್ರಯದಾತುರುಗಳ ಯೋಗ ಕ್ಷೇಮವನ್ನು ವಿಚಾರಿಸಿ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಆತ್ಮಸ್ಥೈರ್ಯ ತುಂಬಿದರು. ಈ ಸಮಯದಲ್ಲಿ ಆಶ್ರಮದ ಸೇವಾಕರ್ತ ದಂಪತಿಗಳಾದ ಸುಜಾತ ಚನ್ನಬಸವ ಸ್ವಾಮಿ ದಂಪತಿಗಳು ಶ್ರೀಗಳಿಗೆ ವಿಶೇಷ ಪಾದಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ನಂತರ ಆಶ್ರಮದ ಆಶ್ರಮದ ಪದಾಧಿಕಾರಿಗಳ ವತಿಯಿಂದ ಶ್ರೀಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು. ನಂತರ ಷ. ಬ್ರ.ಅಭಿನವ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಈ ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಚನ್ನಬಸವ ಸ್ವಾಮಿ ಹಾಗೂ ಕರಡಕಲ್ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಇವರುಗಳ ನೇತೃತ್ವದಲ್ಲಿ ನಡೆಯುತ್ತಿರುವ ಈ ಸೇವಾ ಕಾರ್ಯ ನಮಗೂ ಮತ್ತು ನಾಡಿನ ಹರಗುರು ಚರಮೂರ್ತಿಗಳ ಪ್ರೀತಿಗೆ ಪಾತ್ರವಾಗಿದೆ. ಅನಾಥರ ಆಶ್ರಯಕ್ಕಾಗಿ ಅನಿವಾರ್ಯಕ್ಕಾಗಿ ಹುಟ್ಟಿದ ಕಾರುಣ್ಯ ಕುಟುಂಬ ಅಂಧ–ಅನಾಥರ ಅರಮನೆಯಾಗಿದೆ. ಇ ಸೇವಾ ಕಾರ್ಯವು ಭಗವಂತನ ಪೂಜೆಗಿಂತ ಮಿಗಿಲಾದ ಕಾರ್ಯವಾಗಿದೆ. ಈ ನಮ್ಮ ಕಾರುಣ್ಯಾಶ್ರಮಕ್ಕೆ ಅಮರೇಶ್ವರನ ಆಶೀರ್ವಾದ ನಿರಂತರವಾಗಿರುತ್ತದೆ. ಇಂತಹ ಸೇವೆಗಳು ಮಾಡುತ್ತಿರುವಾಗ ಸಮಾಜದಲ್ಲಿ ಹಲವಾರು ಅನುಭವಗಳಾಗುತ್ತವೆ. ಅವುಗಳನ್ನು ಸಂತೋಷದಿಂದ ಸ್ವೀಕರಿಸಿ ಮುನ್ನಡೆಯಲ್ಲಿ ನೀವು ಮಾಡುವ ಸೇವೆ ನಿಮ್ಮ ಅಂತರಾತ್ಮ ಪರಮಾತ್ಮನಿಗೆ ತಿಳಿದಿರುತ್ತದೆ. ಇಂತಹ ವೃದ್ಧಾಶ್ರಮಗಳು ಹೆಚ್ಚಾದಂತೆಲ್ಲ ಮಾನವೀಯತೆಯು ಕಗ್ಗೊಲೆಯಾಗುತ್ತದೆ ಎಂದರ್ಥ ನಮ್ಮ ಶ್ರೀಮಠದ ಶುಭಾಶೀರ್ವಾದ ಸದವಕಾಲವಿರುತ್ತದೆ. ಜಂಗಮ ಕುಟುಂಬದ ಜಂಗಮ ಸಂಸ್ಕೃತಿಯನ್ನು ಉಳಿಸಿದ ಕೀರ್ತಿ ಈ ಕಾರುಣ್ಯ ಆಶ್ರಮಕ್ಕೆ ಸಲ್ಲುತ್ತದೆ ಎಂದು ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಸಿಂಧನೂರಿನ ಶ್ರೀ ಶಾಂಭವಿ ಪುಣ್ಯಾಶ್ರಮದ ಪೀಠಾಧಿಪತಿಗಳಾದ ವೇ. ಮೂ.ವೀರೇಶ ಯಡಿಯೂರುಮಠ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವೇ. ಮೂ. ಅಮರಯ್ಯ ಸ್ವಾಮಿ ಹಿರೇಮಠ ಹರೇಟನೂರು ಪ್ರಧಾನ ಅರ್ಚಕರು ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿ ದೇವಸ್ಥಾನ ಹರೇಟನೂರು ಹಾಗೂ ಸಂಸ್ಥಾಪಕ ಅಧ್ಯಕ್ಷರು ಕಾರುಣ್ಯ ಆಶ್ರಮ ಸಿಂಧನೂರು. ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಸದಸ್ಯರು ಕಾರುಣ್ಯ ಆಶ್ರಮ ಸಿಂಧನೂರು. ಡಾ. ಚನ್ನಬಸವ ಸ್ವಾಮಿ ಹಿರೇಮಠ ಕಾರ್ಯಾಧ್ಯಕ್ಷರು ಕಾರುಣ್ಯ ಆಶ್ರಮ ಸಿಂಧನೂರು. ಮಂಜುನಾಥ ಗಾಣಿಗೇರ ಕರವೇ ತಾಲೂಕಾಧ್ಯಕ್ಷರು ಸಿಂಧನೂರು.ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ.ಬೀರಪ್ಪ ಯಲಗಲದಿನ್ನಿ. ಶರಣಪ್ಪ ಕಸಬಾ ಲಿಂಗಸೂಗೂರ. ಬಸಲಿಂಗಪ್ಪ ಮುಸ್ಲಿ ಕಾರಲಕುಂಟೆ. ನಾಗರಾಜ ಸ್ವಾಮಿಗಳು ಜ್ಯೋತಿಷಿ ಪಂಡಿತರು ಸಿಂಧನೂರು. ಕೆ. ವೀರವಲ್ಲಿ ಕಂಪ್ಲಿ. ಕೆ. ಪದ್ಮಾವತಿ ಕಂಪ್ಲಿ. ತುಳಸಿ ಕಂಪ್ಲಿ. ವಿಜಯಲಕ್ಷ್ಮಿಕಂಪ್ಲಿ. ಜಯಶ್ರೀ ಕಂಪ್ಲಿ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಶರಣು ಸ್ವಾಮಿ ಹಾಗೂ ಅನೇಕ ಶಿಷ್ಯ ವೃಂದದವರು ಭಾಗವಹಿಸಿದ್ದರು

# ಕೆ.ಹೆಚ್.ಮುನಿಯಪ್ಪನವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲು ಒತ್ತಾಯ

ನೈಜ್ಯ ದೆಸೆ ನ್ಯೂಸ್




ಮಸ್ಕಿ : ಕಾಂಗ್ರೆಸ್ ಪಕ್ಷದ ಹಿರಿಯರು ಮತ್ತು 7ಬಾರಿ ಸಂಸದರಾಗಿದ್ದ ಕೆ.ಹೆಚ್ ಮುನಿಯಪ್ಪರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ದಲಿತ ಮುಖಂಡ ದೊಡ್ಡಪ್ಪ ಮುರಾರಿ ಒತ್ತಾಯಿಸಿದರು. ಪಟ್ಟಣದ ಪತ್ರಿಕಾ ಭಣವದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ಪರಿಶಿಷ್ಟ ಜನಸಂಖ್ಯೆಯಲ್ಲಿ ಹೆಚ್ಚಿರುವ ಮಾದಿಗ ಸಮಾಜದ ಮುನಿಯಪ್ಪರ ಹಿರಿತನವನ್ನು ಗಮನದಲ್ಲಿಟ್ಟುಕೊಂಡು ಉಪಮುಖ್ಯಮಂತ್ರಿ ನೀಡಬೇಕು. ಈಗಾಗಲೇ ಛಲವಾದಿ ಸಮಾಜದಿಂದ ಡಾ.ಜಿ.ಪರಮೇಶ್ವರ ಅವರು ಉಪಮುಖ್ಯಮಂತ್ರಿಯಾಗಿದ್ದಾರೆ. ಆದ್ದರಿಂದ ಈ ಬಾರಿ ಮಾದಿ ಸಮಾಜದವರಿಗೆ ನೀಡಬೇಕೆಂದರು. ಈಗಾಗಲೇ ಮಾಧ್ಯಮದಲ್ಲಿ ಚರ್ಚೆಯಾಗುತ್ತಿರುವ ಹಿನ್ನಲೆ ಮುನಿಯಪ್ಪರ ಬದಲಾಗಿ ಅವರ ಮಗಳಿಗೆ ಸಚಿವ ಸ್ಥಾನ ನೀಡಲಾಗುತ್ತದೆ ಎಂದು ಸುದ್ದಿಯಾಗುತ್ತಿರುವುದನ್ನು ಖಂಡಿಸುತ್ತೇವೆ. ಮುನಿಯಪ್ಪರನ್ನು ರಾಜಕೀಯದಿಂದ ದೂರ ಸರಿಸಲು ಕಾಂಗ್ರೆಸ್ ಪಕ್ಷದವರಿಂದ ಮುನಿಯಪ್ಪ ಬದಲಿಗೆ ಅವರ ಮಗಳಿಗೆ ಸಚಿವ ಸ್ಥಾನ ನೀಡಲು ಮುಂದಾಗಿರುವುದನ್ನು ಮಾದಿಗ ಸಮಾಜ ತೀವ್ರವಾಗಿ ಖಂಡಿಸುತ್ತೇವೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಾದಿಗ ಸಮಾಜಕ್ಕೆ ಕನಿಷ್ಠ 3 ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು. ನಂತರ ಕರಿಯಪ್ಪ ಬೆಂಗಳೂರು ಮಾತನಾಡಿ ಜಿಲ್ಲೆಗೆ ಪ್ರತಿನಿತ್ಯ ನೀಡಿದರೆ ಎಂಎಲ್‌ಸಿ ವಸಂತಕುಮಾರ ಅವರಿಗೆ ಹಾಗೇ ಆರ್.ಬಿ.ತಿಮ್ಮಾಪೂರ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ದುರ್ಗಾಪ್ರಸಾದ ತೋರಣದಿನ್ನಿ, ಉಮಾಪತಿ ತೋರಣದಿನ್ನಿ, ವಿಜಯಕುಮಾರ ಹೂವಿನಭಾವಿ, ಕಾಶಿಂ ಮುರಾರಿ, ಹುಚ್ಚಪ್ಪ ಮಲ್ಕಾಪೂರ ಇದ್ದರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ನೇಮಕಾತಿ 2026: 3 ವಿಷಯ ತಜ್ಞರು, ಯುವ ವೃತ್ತಿಪರರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯವು ಜೂನ್ 2026 ರ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕೃತ ಅಧಿಸೂಚನೆಯ ಮೂಲಕ ವಿಷಯ ತಜ್ಞರು, ಯುವ ವೃತ್ತಿಪರರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 06–ಜೂನ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಅಧಿಕೃತ ವೆಬ್‌ಸೈಟ್: prcrdpr.karnataka.gov.in

# ಜಾಲಹಳ್ಳಿಯ ಶಾಹಿಸ್ತಾ ಬೇಗಂ ಅಂತರಾಷ್ಟ್ರೀಯ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

ಜಾಲಹಳ್ಳಿ ಜೂನ್ 03 : ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಜಾವಿದ್ ಹುಸೇನ್ ಆರತಿ ಹಾಗೂ ಆರತಿ ದಂಪತಿಯ ಪುತ್ರಿ ಶಾಹಿಸ್ತಾ ಬೇಗಂ ಅವರು ಅಂತರಾಷ್ಟ್ರೀಯ ಟಿ20 ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವುದು ಗ್ರಾಮಕ್ಕೆ ಹೆಮ್ಮೆಯ ಸಂಗತಿಯಾಗಿದೆ.ಶಾಹಿಸ್ತಾ ಬೇಗಂ ಅವರು ಈಗಾಗಲೇ ಕರ್ನಾಟಕ ತಂಡದ ಪರವಾಗಿ ಒಡಿಶಾದ ಭುವನೇಶ್ವರದಲ್ಲಿ 2026ರ ಜನವರಿ 16ರಿಂದ 22ರವರೆಗೆ ನಡೆದ “ಇಂ–ಡಸ್‌ಇಂಡ್ ಬ್ಯಾಂಕ್ ವುಮೆನ್ಸ್ ನ್ಯಾಷನಲ್ ಟಿ20 ಕ್ರಿಕೆಟ್ ಟೂರ್ನಮೆಂಟ್ ಫಾರ್ ದಿ ಬ್ಲೈಂಡ್” ಪಂದ್ಯಾವಳಿಯಲ್ಲಿ ಭಾಗವಹಿಸಿ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಈ ಪಂದ್ಯಾವಳಿಯನ್ನು ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಇನ್ ಇಂಡಿಯಾ (ಅಂಃಖ) ಹಾಗೂ ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿತ್ತು.ಕರ್ನಾಟಕ ತಂಡದ ಪರವಾಗಿ ಸೆಮಿಫೈನಲ್ ಪ್ರವೇಶಿಸಲು ಶಾಹಿಸ್ತಾ ಬೇಗಂ ಅವರು ಮಹತ್ವದ ಪಾತ್ರವಹಿಸಿದ್ದು, ಅವರ ಸಾಧನೆಯನ್ನು ಗುರುತಿಸಿ ಆಯೋಜ–ಕರು “ಅಜಡಿಣುಜಿಛಿಚಿಣಜ ಂಜ ಂಠಿಠಿಡಿಜ–ಛಿಚಿಣುಂಟ” ನೀಡಿ ಗೌರವಿಸಿದ್ದಾರೆ.ಈ ಪ್ರಶಸ್ತಿ ಪತ್ರಕ್ಕೆ ಅಂಃಖ ಅಧ್ಯಕ್ಷರಾದ ಬಿ.ಎಸ್. ಗೌಡ, ಮಹಿಳಾ ರಾಷ್ಟ್ರೀಯ ಸಮಿತಿ ಅಧ್ಯಕ್ಷರಾದ



ಜಿ. ಶ್ರೀಧರ್ ಹಾಗೂ ಸಮರ್ಥನಂ ಟ್ರಸ್ಟ್‌ನ ಸಂಸ್ಥಾಪಕ ವ್ಯವಸ್ಥಾಪಕ ವಿಶ್ವಸ್ತರಾದ ಡಾ. ಮಹಾಂತೇಶ್ ಜಿ. ಕಿವಡಸಣ್ಣವರ್ ಅವರು ಸಹಿ ಹಾಕಿ ಅಭಿನಂದನೆ ಸಲ್ಲಿಸಿದ್ದಾರೆ.ಈ ಹಿನ್ನೆಲೆಯಲ್ಲಿ ಜಾಲಹಳ್ಳಿ ಗ್ರಾಮ ಪಂಚಾಯತ್ ವತಿಯಿಂದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಶಾಹಿಸ್ತಾ ಬೇಗಂ ತಂದೆ ಜಾವಿದ್ ಆರತಿ ಅವರನ್ನು ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನರಸಪ್ಪ ಮಾತನಾಡಿ, “ಜಾಲಹಳ್ಳಿ ಗ್ರಾಮದ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಬೆಳಗಿಸಿರುವ ಶಾಹಿಸ್ತಾ ಬೇಗಂ ಅವರಿಗೆ ಗ್ರಾಮ ಪಂಚಾಯತ್ ವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು” ಎಂದು ಭರವಸೆ ನೀಡಿದರು.ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖಂಡ ಹುಸೇನ್ ನಾಸಿ ಅವರು, “ಜಾಲಹಳ್ಳಿ ಗ್ರಾಮದ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಿರುವ ಶಾಹಿಸ್ತಾ ಬೇಗಂ ಹಾಗೂ ಅವರ ತಂದೆ ಜಾವಿದ್ ಆರತಿ ಅವರ ಸಾಧನೆಗೆ ಗ್ರಾಮಸ್ಥರೆಲ್ಲರೂ ಹೆಮ್ಮೆಪಡುತ್ತಿದ್ದಾರೆ. ಗ್ರಾಮ ಪಂಚಾಯತ್ ವತಿಯಿಂದ ಸನ್ಮಾನ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ. ಮುಂದಿನ ಕ್ರೀಡಾ ಜೀವನಕ್ಕೂ ಗ್ರಾಮ ಪಂಚಾಯತ್ ಬೆಂಬಲವಾಗಿ ನಿಲ್ಲಬೇಕು” ಎಂದು ಹೇಳಿದರು.ಇದೇ ವೇಳೆ, ಈ ಹಿಂದೆ ನಡೆದ ಕ್ರೀಡಾಕೂಟದಲ್ಲಿ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದಲೂ ಶಾಹಿಸ್ತಾ ಬೇಗಂ ಸನ್ಮಾನಿಸಲ್ಪಟ್ಟಿರುವುದಾಗಿ ತಿಳಿಸಿದರು.ಈ ಸನ್ಮಾನ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನರಸಪ್ಪ, ಗ್ರಾಮ ಪಂಚಾಯತ್ ಉಪಾಧ್ಯಕ್ಷ ವೀರೇಶ್ ಅರಕೇರಿ, ಸದಸ್ಯ ಮಕತುಮ್ ಪರಾಸಿ, ಮುಖಂಡರಾದ ವೆಂಕೋಬ ತೋಟದ, ಹುಸೇನ್ ನಾಸಿ, ರಂಗಪ್ಪ ತೊಗರಿ, ರಾಜು ತವಗ, ರಿಯಾಜ್ ಆರತಿ, ಜಾವಿದ್ ಆರತಿ, ಜಾಕಿರ್ ಹುಸೇನ್ ಆರತಿ ಸೇರಿದಂತೆ ಊರಿನ ಪ್ರಮುಖರು ಭಾಗವಹಿಸಿದ್ದರು.



IndusInd Bank Women's National T20 Cricket Tournament for the Blind 2026
6th Edition
Certificate of Appreciation
This Certificate is awarded to Shahista Begam
Category B2 representing Karnataka declared the
SEMI-FINALIST of IndusInd Bank Women's National T20 Cricket Tournament for the Blind - 2026




## ಕಳುವಾದ ಮೊಬೈಲ್ ಹುಡುಕಿ ಮಾಲೀಕ–ರಿಗೆ ಅಸ್ತಾಂತರಿಸಿದ ಸಿ ಪಿ ಐ ಹೊಸಕೇರಪ್ಪ

**ನೈಜ್ಯ ದೆಸೆ ನ್ಯೂಸ್**



ಲಿಂಗಸಗೂರು :– ಪಟ್ಟಣದ ಪೊಲೀಸ್ ಠಾಣೆಯಲ್ಲಿ ತಮ್ಮ ಮೊಬೈಲ್ ಕಳುವಾಗಿದೆ ಎಂದು ಸಾರ್ವಜನಿಕರು ಬೇರೆ ಬೇರೆ ದೂರು ನೀಡಿದ ಇನ್ನಲೆಯಲ್ಲಿ ಪೊಲೀಸರು ಠಾಣೆಯಲ್ಲಿ ದೂರನ್ನು ದಾಖಲಿಸಿ ಕೊಂಡು ಮೊಬೈಲ್ ನ ನೆಟ್ವರ್ಕ್ ಟ್ರೇಸ್ ಮಾಡಿ ಕಳುವಾದ ಒಟ್ಟು 9 ಮೊಬೈಲ್ ಅನ್ನು ಹುಡುಕಿ ದೂರು ದಾರರಿಗೆ ಸಿ ಪಿ ಐ ಹೊಸಕೇರಪ್ಪ ಒಪ್ಪಿಸಿದ್ದಾರೆ . ಈ ಕಳುವದ ಎಲ್ಲ ಕಂಪನಿಯ ಮೊಬೈಲ್ ನ ಒಟ್ಟು ಮೊತ್ತ 172000 ರೂ ಆಗಿದ್ದು ಪೊಲೀಸರ ಈ ಕಾರ್ಯಾಚರಣೆ ಯನ್ನು ದೂರು ದಾರರು ಹಾಗೂ ಸಾರ್ವಜನಿಕರು ಪ್ರಸಂಶಿಸಿದ್ದಾರೆ .

**ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# ಅಂಗನವಾಡಿ ಕಾರ್ಯಕರ್ತೆ ನೇಮಕದಲ್ಲಿ ಅನ್ಯಾಯ ಆರೋಪ"

**ನೈಜ್ಯ ದೆಸೆ ನ್ಯೂಸ್**

ಮಾನ್ವಿ –: ತಾಲೂಕಿನ ಚಿವ್ಲಾಪುರ ಗ್ರಾಮದ ಅಂಗನವಾಡಿ–2 ಕಾರ್ಯಕರ್ತೆ ಹುದ್ದೆಯ 2025–26ನೇ ಸಾಲಿನ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅರ್ಹ ಅಭ್ಯರ್ಥಿ ಕು.ಶ್ರೀದೇವಿ ತಂದೆ ಹನುಮೇಶ ಅವರಿಗೆ ಅನ್ಯಾಯವಾಗಿದೆ.ದ್ವಿತೀಯ ಪಿಯುಸಿಯಲ್ಲಿ 471 ಮಾರ್ಕ್ಸ್ ಶೇಕಡಾ 78.50%ರಷ್ಟು ಮಾರ್ಕ್ಸ್ ಪಡೆದು ಆಯ್ಕೆ ಮಾನದಂಡದಲ್ಲಿ ಮುಂಚೂಣಿಯಲ್ಲಿ ಇದ್ದರೂ ನನ್ನ ಆದ್ಯತೆ ಪರಿಗಣಿಸದೆ ಇಲಾಖೆಯು ಕೇವಲ ಶೇ.65% ಮಾರ್ಕ್ಸ್ ಗಳಿಸಿದವರನ್ನು ಆಯ್ಕೆ ಮಾಡುವ ಮೂಲಕ ಅಂಗನವಾಡಿ ನೇಮಕದಲ್ಲಿ ಭಾರಿ ಅಕ್ರಮವೆಸಲಾಗಿದೆ ಎಂದು ಗಂಭೀರ ಆರೋಪ ಮಾಡಲಾಗಿದೆ.ಈ ಕುರಿತು ಜಿಲ್ಲಾಧಿಕಾರಿಗೆ ನೀಡಿರುವ ದೂರಿನಲ್ಲಿ ಶ್ರೀದೇವಿ ಅವರು 471






ಅಂಕಗಳೊಂದಿಗೆ ಶೇ.78.50 ಅಂಕ ಗಳಿಸಿ ಮೆರಿಟ್ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಆದರೆ ಇಲಾಖೆಯು ಕೇವಲ ಶೇ. 65 ಅಂಕ ಗಳಿಸಿರುವ ಕಡಿಮೆ ಅಂಕದ ಅಭ್ಯರ್ಥಿಯನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಅಥ–'ವಾ ಸಾಫ್ಟ್‌ವೇರ್‌ನಲ್ಲಿ ಇಲಾಖೆಯ ಕಡೆಯಿಂದ ಏನಾದರೂ ತಾಂತ್ರಿಕ ದೋಷ ಉಂಟಾಗಿದ್ದರೆ ಉನ್ನತಾಧಿಕಾರಿಗಳು ಅದನ್ನು ಪರಿಶೀಲಿಸಿ ಸರಿಪಡಿಸಬೇಕು. ತಂತ್ರಜ್ಞಾನದ ಲೋಪದೋಷಗಳನ್ನು ಮುಂದಿಟ್ಟು ಗ್ರಾಮೀಣ ಭಾಗದ ಪ್ರತಿಭಾವಂತ ಅಭ್ಯರ್ಥಿಗೆ ಉದ್ಯೋಗ ವಂಚಿಸುವುದು ಸರಿಯಲ್ಲ ಎಂದು ಶ್ರೀದೇವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಈ ಗಂಭೀರ ಲೋಪದೋಷಗಳನ್ನು ತಕ್ಷಣ ಸರಿಪಡಿಸಿ ಅರ್ಹತೆಯ ಆಧಾರದಮೇಲೆ ನೇಮಕಾತಿ ಆದೇಶ ನೀಡಬೇಕು ಎಂದು ಜಿಲ್ಲಾಧಿಕಾರಿ ಎಸ್ .ಪೂವಿತಾ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆ ಉಪನಿರ್ದೇಶಕಿ ಶರಣಮ್ಮ ಅವ–ರಿಗೆ ನೀಡಿರುವ ದೂರಿನಲ್ಲಿ ಒತ್ತಾಯಿಸಿದ್ದಾರೆ.

# ಜಾಲಹಳ್ಳಿಯಲ್ಲಿ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಕೆಪಿಆರ್‌ಎಸ್ – ಡಿವೈಎಫ್‌ಐ ಧರಣಿ ಸತ್ಯಾಗ್ರಹ 24 ಲೇಔಟ್‌ಗಳಲ್ಲಿ ಮೂಲಸೌಕರ್ಯ ಕೊರತೆ ಅಕ್ರಮ ಬಯಲು

**ನೈಜ್ಯ ದೆಸೆ ನ್ಯೂಸ್**

ರಾಯಚೂರು ಜೂ 03: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಗ್ರಾಮ ಸಮಿತಿ ಜಾಲಹಳ್ಳಿ ಹಾಗೂ ಡಿವೈಎಫ್‌ಐ (ಆಜಈಖ) ವಲಯ ಸಮಿತಿ ಜಾಲಹಳ್ಳಿ ನೇತೃತ್ವದಲ್ಲಿ ವಿವಿಧ ಜನಪರ ಬೇಡಿಕೆಗಳನ್ನು ಈಡೇ–ರಿಸುವಂತೆ ಆಗ್ರಹಿಸಿ ಬೃಹತ್ ಧರಣಿ ಸತ್ಯಾಗ್ರಹ ನಡೆಸಲಾಯಿತು. ಗ್ರಾಮದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ 110/11 ಕೆವಿ ವಿದ್ಯುತ್ ಉಪಕೇಂದ್ರಕಾಮಗಾರಿ,ಕಳಪೆ ರಸ್ತೆಹಾಗೂ ಚರಂಡಿ ಕಾಮಗಾ–ರಿಗಳು, ರೈತರಿಗೆ ರಸಗೊಬ್ಬರ ಕೊರತೆ, ಲೇಔಟ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಅಭಾವ ಸೇರಿದಂತೆ ಹಲವು ಸಮಸ್ಯೆಗಳ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.ಪ್ರಮುಖ ಬೇಡಿಕೆಗಳು: 1) ಜಾಲಹಳ್ಳಿ 110/11 ಕೆವಿ ವಿದ್ಯುತ್ ಉಪಕೇಂದ್ರ ಕಾಮಗಾರಿಯನ್ನು ತಕ್ಷಣ ಆರಂಭಿಸಬೇಕು. 2) ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನದವರೆಗೆ ನಡೆದಿರುವ ಕಳಪೆ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಯ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ಮರು ನಿರ್ಮಾಣ ಮಾಡಬೇಕು. 3) ಬುಳ್ಳಯ್ಯನ ಕಟ್ಟೆಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ಸಿಸಿ ರಸ್ತೆ ಕಾಮಗಾರಿಯನ್ನು ಕೂಡಲೇ ಆರಂಭಿಸಬೇಕು.4) ಜಾಲಹಳ್ಳಿ ಮುಖ್ಯ ಹೆದ್ದಾರಿಯಲ್ಲಿ ರಸ್ತೆ ವಿಭಜಕ ಅಳವಡಿಸಬೇಕು. 5) ಕೆಕೆಆರ್‌ಡಿಬಿ ಅನುದಾನದಲ್ಲಿ ಕೈಗೊಂಡಿರುವ ಎಚ್. ಸಿದ್ದಪ್ಪ ರಸ್ತೆ ಕಾಮಗಾರಿಯ ಕಳಪೆ ಕಾಮಗಾರಿಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಬೇಕು.6) ರೈತರಿಗೆ ಸಮರ್ಪಕ ರಸಗೊಬ್ಬರ ಪೂರೈಕೆ ಮಾಡಿ ಮೂಲ ಬೆಲೆಗೆ ಮಾರಾಟ





ಹಾಗೂ ಕಡ್ಡಾಯ ರಶೀದಿ ವಿತರಣೆ ಖಚಿತಪಡಿಸಬೇಕು. 7) ಜಾಲಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾ–ರಿಗಳ ನಿರ್ಲಕ್ಷ್ಯದ ವಿರುದ್ಧ ಕ್ರಮ ಕೈಗೊಳ್ಳಬೇಕು. 8) ಜಾಲಹಳ್ಳಿ ವ್ಯಾಪ್ತಿಯ 24 ಲೇಔಟ್‌ಗಳಲ್ಲಿ ಸರ್ಕಾರಿ ಸೌಲಭ್ಯಕ್ಕಾಗಿ ಮೀಸಲಾದ ಜಾಗಗಳನ್ನು ಪಂಚಾಯಿತಿ ಹೆಸ–ರಿಗೆ ನೋಂದಣಿ ಮಾಡಿಸಬೇಕು.9) ಸಂತೆಯ ಮೈದಾನವನ್ನು ಅತಿಕ್ರಮಣದಿಂದ ಮುಕ್ತಗೊಳಿಸಿ ಕ್ರಮ ಕೈಗೊಳ್ಳಬೇಕು.10) ಭಗತ್ ಸಿಂಗ್ ಕಾಲೋನಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. 11) ಶ್ರೀರಂಗನಾಥ ಲೇಔಟ್ ಪ್ರದೇಶಕ್ಕೆ ಕೂಡಲೇ ವಿದ್ಯುತ್ ಸಂಪರ್ಕ ಒದಗಿಸಬೇಕು. ಅಧಿಕಾರಿಗಳ ಭೇಟಿ  ಹಾರಿಕೆ ಉತ್ತರ ಪ್ರತಿಭಟನೆ ಹಿನ್ನೆಲೆಯಲ್ಲಿ ಜೆಸ್ಕಾಂ, ಕೆಕೆಆರ್‌ಡಿಬಿ, ಕೃಷಿ, ಪಂಚಾಯತ್ ರಾಜ್ ಸೇ–ರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು.ಕೃಷಿ ಅಧಿಕಾ–ರಿಯಾದ ಆಂಜನೇಯ ಅವರು ರೈತರಿಗೆ ರಸಗೊಬ್ಬರ ಮಾರಾಟದಲ್ಲಿ ಜಿ.ಎಸ್.ಟಿ ಬಿಲ್ ಹಾಗೂ ರಶೀದಿ ಕಡ್ಡಾಯವಾಗಿ ನೀಡುವಂತೆ ವ್ಯಾಪಾರಿಗಳಿಗೆ ಸೂಚಿಸಲಾಗುವುದು ಎಂದು ಹೇಳಿದರು. ಕೆಕೆಆರ್‌ಡಿಬಿ ಅಧಿಕಾರಿಗಳು ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನದವರೆಗೆ ರಸ್ತೆ ಪರಿಶೀಲನೆ ನಡೆಸಿ, ಹೊಸ ರಸ್ತೆ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು. ಬುಳ್ಳಯ್ಯನ ಕಟ್ಟೆಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ಬಾಕಿ ಉಳಿದಿರುವ ಸಿಸಿ ರಸ್ತೆ ಕಾಮಗಾರಿಯನ್ನು ಕೂಡಲೇ ಆರಂಭಿಸಲಾಗುವುದು ಎಂದರು.ಜೆಸ್ಕಾಂ ಅಧಿಕಾರಿಗಳಾದ ಜಿಲ್ಲಾ ಸ್ಟೇಷನ್ ಎಇಇ ಶ್ರೀಧರ್, ಜಿಲ್ಲಾ ಇಇ ತಿಮ್ಮಾರೆಡ್ಡಿ ಹಾಗೂ ತಾಲೂಕು ಎಇಇ ಶ್ರೀನಿವಾಸ್ ಅವರು 110/11 ಕೆವಿ ವಿದ್ಯುತ್ ಉಪಕೇಂದ್ರ ಕಾಮಗಾರಿಯ ಕುರಿತು ಮಾಹಿತಿ ನೀಡಿದರು. ಆದರೆ ಸ್ಪಷ್ಟ ದಿನಾಂಕ ನೀಡದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.24 ಲೇಔಟ್‌ಗಳ ಕುರಿತು ಅಧಿಕಾರಿಗಳ ಒಪ್ಪಿಗೆ ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕರಾದ ಅಣ್ಣಾರಾವ್ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿ ನರಸಪ್ಪ ಸ್ಥಳಕ್ಕೆ ಭೇಟಿ ನೀಡಿ ಜಾಲಹಳ್ಳಿಯ 24 ಲೇಔಟ್‌ಗಳಲ್ಲಿ ಮೂಲಸೌಕರ್ಯಗಳಿಲ್ಲದೆ ಅಕ್ರಮ ಅಭಿವೃದ್ಧಿ ನಡೆದಿರುವುದನ್ನು ಒಪ್ಪಿಕೊಂಡರು.ಲೇಔಟ್ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ಸಿಎ ಸೈಟ್‌ಗಳನ್ನು ಸರ್ಕಾರದ ಹೆಸರಿಗೆ ನೋಂದಣಿ ಮಾಡಿಸುವುದಾಗಿ ಹಾಗೂ ಮೂಲಸೌಕರ್ಯ ಒದಗಿಸದ ಲೇಔಟ್ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.ಧರಣಿ ಮುಂದುವರಿಕೆ ಎಚ್ಚರಿಕೆ “110/11 ಕೆವಿ ಉಪಕೇಂದ್ರ ಕಾಮಗಾರಿ, ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ತಕ್ಷಣ ಆರಂಭಿಸುವವರೆಗೆ ಧರಣಿ ಸತ್ಯಾಗ್ರಹ ಮುಂದುವರಿಸಲಾಗುವುದು” ಎಂದು ಹೋರಾಟಗಾರರು ಎಚ್ಚ–ರಿಸಿದರು. ಈ ಸಂದರ್ಭದಲ್ಲಿ ಹನುಮಂತ ಮಡಿವಾಳ, ರಂಗನಾಥ ಬುಂಕಲದೊಡ್ಡಿ, ರಾಜು ನಾಯಕ, ರೀಯಾಜ್ ಆರ್ತಿ, ನರಸಣ್ಣ ನಾಯಕ, ಶಬ್ಬೀರ್, ಬೀಮಣ್ಣ ಗುಮೇದಾರ, ರಾಮನಗೌಡ ಮಾಲಿಪಾಟೀಲ್, ಮಲ್ಲಿಕಾರ್ಜುನ ಸಿರಣಿ, ರಂಗಣ್ಣ ಕೊಲ್ಕಾರ್, ಮೌನೇಶ, ಮಲ್ಲಯ್ಯ ಗೌಡೂರು, ದುರುಗಪ್ಪ ಹೊರಟ್ಟಿ, ವಿಶ್ವ ಅಂಗಡಿ, ಶಿವಪ್ಪ ಚಿಂಚರಕಿ, ಗ್ರಾಮ ಪಂಚಾಯಿತಿ ಸದಸ್ಯರಾದ ಮಕ್ತುಮ್ ಭಾಷಾ, ಕುಮಾರ ಚಪ್ಪಳಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.






# ಭೀಮಣ್ಣ ನಾಯಕ ಸಾಮಾಜಿಕ ಕಳಕಳಿ ಸಮುದಾಯಕ್ಕೆ ಮಾದರಿ: ಶ್ರೀ ವರದಾನೇಶ್ವರ ಸ್ವಾಮಿಗಳು

**ನೈಜ್ಯ ದೆಸೆ ನ್ಯೂಸ್**

ಮಸ್ಕಿ ತಾಲ್ಲೂಕಿನ ಕಾಚಾಪೂರ ಗ್ರಾಮದ ಭೀಮಣ್ಣ ನಾಯಕ ಸಿನಿಮಾ ನಟ,ಸಾಮಾಜಿ–ಕ ಹೊರಾಟಗಾರ ಅವರ ಹುಟ್ಟು ಹಬ್ಬವನ್ನು ಅಭಿಮಾನಿಗಳಿಂದ ಏರ್ಪಸಿದ್ದರು. ಈ ಕಾರ್ಯಕ್ರಮದಲ್ಲಿ ಸಾನಿದ್ಯವನ್ನು ವಹಿಸಿದ ಶ್ರೀ ವರದಾನೇಶ್ವರ ಸ್ವಾಮಿಗಳು ವಾಲ್ಮೀಕಿ ಆಶ್ರಮ ಗೊಲಪಲ್ಲಿ ಪೂಜ್ಯರು ಮಾತನಾಡಿ ಭೀಮಣ್ಣ ನಾಯಕ ಒಬ್ಬ ಸಾಧರಣ ಕುಟುಂಬದಲ್ಲಿ ಜನಿಸಿ,ಯಾವುದೇ ಶಾಲೆ ಕಲಿತಿಲ್ಲ, ಇಂತಹದರಲ್ಲಿ ಎಂಟು ಸಿನಿಮಾಗಳಲ್ಲಿ ನಟಸಿದ ಕೀರ್ತಿ ಸಲ್ಲುತ್ತದೆ ನಮ್ಮ ಭಾಗದಲ್ಲಿ ಸಿನಿಮಾ ಕ್ಷೇತ್ರ ಬಹಳ ದೂರ ಅಂತಹದರಲ್ಲಿ ಹಿಂದುಳಿದ ಭಾಗದಿಂದ ಸಿನಿಮಾಕ್ಕೆ ದಾಪಗಾಲು ಹಾಕಿದ್ದು




ಹೆಮ್ಮೆಯ ವಿಚಾರ, ಹಾಗೆ ಸಾಮಾಜಿ– ಕ ಹೋರಾಟ , ಮುಖ್ಯವಾಗಿ ಅಪ್ಪಟ ಒಬ್ಬ ರೈತನಾಗಿ ಸೇವೆ ಮಾಡುತ್ತಿದ್ದು, ಇಂತಹ ದಟ್ಟ ಅಡವಿಯಲ್ಲಿರುವ ಒಂಟಿ ಮನೆಗೆ ಅವರ ಹುಟ್ಟು ಹಬ್ಬಕ್ಕೆ ಅಪಾರ ಜನರು ಬಂದು ಆಶೀರ್ವಾದ ಮಾಡಿದ್ದು,ನಿಜವಾದ ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ ಎಂದು ಹೇಳಿದರು.ಈ ವೇಳೆಯಲ್ಲಿ ಹನುಮಂತತಾತ ಪೂಜಾರಿ ಯರಲಗಡ್ಡಿ, ಮಾನ್ವಿಯ ಖ್ಯಾತ ವಕೀಲರಾದ ಶ್ಯಾಮಸುದರ ನಾಯಕ,ಮಹಾಂತೇಶ ನಾಯಕ ಜಾಲಾವಾಡಗಿ,ನಿಂಗಪ್ಪ ಗುತ್ತೆದಾರ ಕವಿತಾಳ,ಚಂದ್ರಶೇಖರ ನಾಯಕ ಉದ್ಬಳ ಮಸ್ಕಿ ತಾಲ್ಲೂಕ ಶ್ರೀ ವಾಲ್ಮೀಕಿ ಸಮಾಜದ ಅದ್ಯಕ್ಷ, ಚಂದ್ರು ಯಾಪಲಪರ್ವಿ ಹಾಗೂ ಇನ್ನೂ ಅನೇಕರು ಇದ್ದರು.ಮಹಿಬೂಬು ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮವು ಜನರಿಂದ ಮೆಚ್ಚುಗೆಯನ್ನು ಪಡೆಯಿತು.


## ಶಿಕ್ಷಣ ಮಾರ್ಗದರ್ಶಿ ವಿಶೇಷ

### BCA

BCA (Bachelor of Computer Applications) ಒಂದು ಕಂಪ್ಯೂಟರ್ ಅಪ್ಲಿಕೇಶನ್ ಮತ್ತು ಐಟಿ ಕ್ಷೇತ್ರದ ಪದವಿ ಕೋರ್ಸ್ ಆಗಿದೆ. ಇದರಲ್ಲಿ ಕಂಪ್ಯೂಟರ್, ಪ್ರೋಗ್ರಾಮಿಂಗ್, ಸಾಫ್ಟ್‌ವೇರ್ ಅಭಿವೃದ್ಧಿ, ಡೇಟಾಬೇಸ್ ಮುಂತಾದ ವಿಷಯಗಳನ್ನು ಕಲಿಸಲಾಗುತ್ತದೆ. ಕೋರ್ಸ್ ಅವಧಿ:ಸಾಮಾನ್ಯವಾಗಿ 3 ವರ್ಷಗಳು (6 ಸೆಮಿಸ್ಟರ್) ಅರ್ಹತೆ (Eligibility): 12ನೇ ತರಗತಿ (PUC/Intermediate) ಪಾಸ್ ಆಗಿರಬೇಕು ಯಾವುದೇ ವಿಭಾಗದಿಂದ (Science/Commerce/Arts) ಸೇರಬಹುದು (ಕಾಲೇಜಿನ ನಿಯಮಗಳಿಗೆ ಅನುಗುಣವಾಗಿ)ಗಣಿತ/ಕಂಪ್ಯೂಟರ್ ವಿಷಯ ಕೆಲ ಕಾಲೇಜುಗಳಲ್ಲಿ ಅಗತ್ಯ ಇರಬಹುದು ಮುಖ್ಯ ವಿಷಯಗಳು:Programming Languages (C, C++, Java, Python) Data Structures Database Management System (DBMS) Web Development Computer Networks Software Engineering Operating System Mobile Application Development BCA ನಂತರದ ಅವಕಾಶಗಳು:Software Developer Web Developer App Developer Data Analyst System Administrator Database Administrator IT Support Engineer ಮುಂದಿನ ಉನ್ನತ ಶಿಕ್ಷಣ: ಒಅಂ (Master of Computer Applications) MBA (Information Technology) Data Science / Cyber Security ಕೋರ್ಸ್‌ಗಳು ಉದ್ಯೋಗ ಕ್ಷೇತ್ರಗಳು:ಋಖಿ ಕಂಪನಿಗಳು Software Companies Banking Sector Government IT Departments Startupsಸಂಬಳ: ಹೊಸ ಪದವೀಧರರಿಗೆ ಸಾಮಾನ್ಯವಾಗಿ ₹2–6 ಲಕ್ಷ ವಾರ್ಷಿಕದಿಂದ ಆರಂಭವಾಗಬಹುದು (ಕೌಶಲ್ಯ, ಸ್ಥಳ, ಕಂಪನಿಯ ಮೇಲೆ ಅವಲಂಬಿತ).

## "ಕಠಿಣ ಕಾನೂನಿನ ನಡುವೆ ಕಾಡು ಪ್ರಾಣಿಗಳ ಬೇಟೆಗೆ ಕಡಿವಾಣ"

ನೈಜ್ಯ ದೆಸೆ ನ್ಯೂಸ್



ದೇವದುರ್ಗ ತಾಲ್ಲೂಕಿನ ಕುರಚಲು ಕಾಡಿನಲ್ಲಿ ಮೊಲಗಳನ್ನು ಬೇಟೆಯಾಡಿ ಸಂಭ್ರಮಿಸಿದ್ದ ಆರೋಪಿ ಬಂಧನವಾಗಿದೆ. ದೇವದುರ್ಗ –: ನೆರೆಯ ಜಿಲ್ಲೆಗಳಲ್ಲಿನ ಕುರಚಲು ಕಾಡಿನಲ್ಲಿ ವನ್ಯಜೀವಿಗಳನ್ನು ಬೇಟೆಯಾಡಿ ಊರು ಸೇರಿಕೊಳ್ಳುತ್ತಿರುವ ಕಳ್ಳಬೇಟೆಗಾರರನ್ನು ಪತ್ತೆ ಹಚ್ಚಲು ಜಿಲ್ಲೆಯ ಅರಣ್ಯ ಇಲಾಖೆಯ ಅಧಿಕಾರಿಗಳು ವಿಶೇಷ ತಂಡ ರಚಿಸಿದ್ದಾರೆ.ವಿಶೇಷ ತಂಡವು ಮೂರು ದಿನಗಳಿಂದ ಹಗಲು ರಾತ್ರಿ ಎನ್ನದೇ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಪತ್ತೆ ಮಾಡುತ್ತಿದ್ದಾರೆ. ಕಾರ್ಯಾಚರಣೆ ಸಂದರ್ಭದಲ್ಲಿ ಕಳ್ಳಬೇಟೆಗಾರ ಜಾಲದ ಯುವಕನೊಬ್ಬನನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ವನ್ಯಜೀವಿಗಳ ಕಳ್ಳಬೇಟೆ ಪ್ರಕರಣ ನಡೆಯುವುದು ಅಪರೂಪ. ಆದರೆ, ಜಿಲ್ಲೆಯ ದೇವದುರ್ಗ ತಾಲ್ಲೂಕಿನ ತಂಡವೊಂದು ರಹಸ್ಯವಾಗಿ ನೆರೆಯ ಜಿಲ್ಲೆಗಳು ಹಾಗೂ ಬೆಳಗಾವಿ ಜಿಲ್ಲೆಯ ಅರಣ್ಯ ಪ್ರದೇಶಗಳಿಗೆ ಹೋಗಿ ಮೊಲಗಳನ್ನು ಬೇಟೆ ಆಡುವುದು ಮುಂದುವರಿಸಿತ್ತು. ಆರೋಪಿಗಳನ್ನು ಪತ್ತೆ ಹಚ್ಚುವುದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ದೊಡ್ಡ ಸವಾಲಾಗಿತ್ತು.ಯುಗಾದಿ ಸಂದರ್ಭದಲ್ಲಿ ಕೆಲವರು ಮೊಲಗಳನ್ನು ಬೇಟೆಯಾಡುವ ಸಂಪ್ರದಾಯ ರೂಢಿಸಿಕೊಂಡಿದ್ದರು. ವನ್ಯಜೀವಿ ಸಂರಕ್ಷಣೆಯ ಜಾಗೃತಿ ಹಾಗೂ ಬಿಗಿ ಕ್ರಮಗಳಿಂದಾಗಿ ರಾಯಚೂರು ಜಿಲ್ಲೆಯಲ್ಲಿ ಕಡಿವಾಣ ಬಿದ್ದಿದೆ, ಆದರೆ ತೆರೆಮರೆಯಲ್ಲಿ ಕೆಲವರು ಕಳ್ಳಬೇಟೆ ಆಡುತ್ತಿದ್ದರು ಇದೀಗ ಅದಕ್ಕೂ ಕಡಿವಾಣ ಹಾಕಲಾಗಿದೆ.'ದೇವದುರ್ಗ ಪ್ರಾದೇಶಿಕ ಅರಣ್ಯ ವಲಯದ ವಲಯ ಅರಣ್ಯಾಧಿಕಾರಿ ಅಲಿವುದ್ದಿನ್ ನೇತೃತ್ವದಲ್ಲಿ ಉಪ ವಲಯ ಅರಣ್ಯ ಅಧಿಕಾರಿ ಗಸ್ತು ಅರಣ್ಯ ಪಾಲಕರ ತಂಡ ರಚಿಸಿ ಉಡ ಮತ್ತು ಮೊಲಗಳನ್ನು ಭೇಟೆಯಾಡಿ ಇನ್‌ಸ್ಟಾಗ್ರಾಂನಲ್ಲಿ ಅಪ್ಲೋಡ್ ಮಾಡಿದ್ದ ಆಕಳಕುಂಪಿಯ ಬಸಯ್ಯ ಅಲಿಯಾಸ್ ಮುದ್ದಪ್ಪ ಆಕಳಕುಂಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ನೀಡಲಾಗಿದೆ' ಎಂದು ರಾಯಚೂರು ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ ಬಾಬು ತಿಳಿಸಿದ್ದಾರೆ.'ಚಿರತೆ, ಕೃಷ್ಣಮೃಗ, ಉಡ, ಕಾಡುಹಂದಿ ಹಾಗೂ ಮೊಲಗಳ ವಾಸಕ್ಕೆ ಸೂಕ್ತವಾದ ಕುರುಚಲು ಕಾಡು ರಾಯಚೂರು ಜಿಲ್ಲೆಯಲ್ಲಿ ಇದೆ. ಅರಣ್ಯ ಇಲಾಖೆಯ ಬಿಗಿ ಕ್ರಮಗಳಿಂದಾಗಿ ವನ್ಯಜೀವಿಗಳು ಬದುಕಲು ಸಾಧ್ಯವಾಗಿವೆ. ಆದರೂ ಕೆಲವು ಕಿಡಿಗೇಡಿಗಳು ತೆರೆಮರೆಯಲ್ಲಿ ಕೃತ್ಯಗಳನ್ನು ಎಸಗುತ್ತಾರೆ. ಇದಕ್ಕೂ ಕಡಿವಾಣ ಹಾಕುವ ದಿಸೆಯಲ್ಲಿ ಬಿಗಿ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದ್ದಾರೆ.'ರಾಯಚೂರು ಜಿಲ್ಲೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ವನ್ಯಜೀವಿಗಳ ಬೇಟೆಯಾಡಿದ ನಾಲ್ಕು ಪ್ರಕರಣಗಳು ದಾಖಲಾಗಿವೆ. ವನ್ಯಜೀವಿಗಳನ್ನು ಕೊಂದು ಖುಷಿಪಡುವ ಮಾನಸಿಕ ಸ್ಥಿತಿ ಕೊನೆಯಾಗಬೇಕು. ಈ ದಿಸೆಯಲ್ಲಿ ಗ್ರಾಮಸ್ಥರಿಗೆ ತಿಳಿವಳಿಕೆ ಕೊಡುವ ಕಾರ್ಯವೂ ನಡೆದಿದೆ' ಎನ್ನುತ್ತಾರೆ.'ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸುವ ಮೂಲಕ ಅರಣ್ಯ ಪ್ರದೇಶವನ್ನು ಹೆಚ್ಚಿಸಲಾಗಿದೆ. ಇದರಿಂದ ವನ್ಯಜೀವಿಗಳ ರಕ್ಷಣೆಗೂ ಅನುಕೂಲವಾಗಿದೆ. ಸಾರ್ವಜನಿಕರೂ ಸಹ ಕಾಡು ಪ್ರಾಣಿಗಳ ರಕ್ಷಣೆ ಹಾಗೂ ಪೋಷಣೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

## "ರಸಗೊಬ್ಬರ ಮಾರಾಟ ಅಂಗಡಿಗಳಲ್ಲಿ ದಾಸ್ತಾನು ಪರಿಶೀಲನೆ"

ನೈಜ್ಯ ದೆಸೆ ನ್ಯೂಸ್

ಕವಿತಾಳದಲ್ಲಿ ಕೃಷಿ ಸಹಾಯಕ ಅಧಿಕಾರಿ ಶಿವಶರಣ ಭೋವಿ ರಸಗೊಬ್ಬರ ಮಾರಾಟ ಮಳಿಗೆಗೆ ಮಂಗಳವಾರ ಭೇಟಿ ನೀಡಿ ದಾಸ್ತಾನು ಪರಿಶೀಲಿಸಿದರು.ಕವಿತಾಳ: 'ರಸಗೊಬ್ಬರ ಅಕ್ರಮ ಮಾರಾಟ ಮತ್ತು ಹೆಚ್ಚಿನ ದರ ಪಡೆದಲ್ಲಿ ಕ್ರಮ ಕೈಗೊಳ್ಳಲಾಗುವುದು. ರೈತರ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ವಿತರಣೆ ಮಾಡಬೇಕು' ಎಂದು ಅಂಗಡಿ ಮಾಲೀಕರಿಗೆ ಕೃಷಿ ಸಹಾಯಕ ಅಧಿಕಾರಿ ಶಿವಶರಣ ಭೋವಿ ತಾಕೀತು ಮಾಡಿದರು. ಪಟ್ಟಣದಲ್ಲಿ ವಿವಿಧ ರಸಗೊಬ್ಬರ ಮಾರಾಟ ಮಳಿಗಗಳಿಗೆ ಮಂಗಳವಾರ ಭೇಟಿ ನೀಡಿ ದಾಸ್ತಾನು ಪರಿಶೀಲಿಸಿದ ಅವರು, 'ರಸಗೊಬ್ಬರ ಕೊರತೆ ಉಂಟಾಗಿಲ್ಲ, ರೈತರು ಆತಂಕ ಪಡುವ ಅಗತ್ಯವಿಲ್ಲ, ಕೃತಕ ಅಭಾವ ಸೃಷ್ಟಿ ಮಾಡಿದಲ್ಲಿ ಇಲಾಖೆ




ನಿಯಮದಂತೆ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು. 'ಯೂರಿಯಾ, ಡಿಎಪಿ, ನ್ಯಾನೊ ಯೂರಿಯಾ, 20:20:0:13 ಮತ್ತು ಕಾಂಪ್ಲೆಕ್ಸ್ ರಸಗೊಬ್ಬರ ಅಗತ್ಯ ಸಂಗ್ರಹವಿದ್ದು ರೈತರ ಬೇಡಿಕೆಗೆ ಅನುಗುಣವಾಗಿ ವಿತರಿಸಲು ಕ್ರಮ ವಹಿಸಲಾಗಿದೆ, ಎಫ್‌ಐಡಿ ಅಥವಾ ಆದಾರ್ ಗುರುತಿನ ಚೀಟಿ ಒದಗಿಸಿ ರೈತರು ರಸಗೊಬ್ಬರ ಖರೀದಿಸಬಹುದು, ಕೆ-ಕಿಸಾನ್ ತಂತ್ರಾಂಶ ಬಳಕೆಯಲ್ಲಿ ಸರ್ವರ್ ಸಮಸ್ಯೆಯಿಂದ ಕೆಲವೆಡೆ ವಿಳಂಬವಾಗುತ್ತಿದೆ. ಈ ಬಗ್ಗೆ ರೈತರು ಆತಂಕ ಪಡದೆ ಅಂಗಡಿ ಮಾಲೀಕರೊಂದಿಗೆ ಸಹಕರಿಸಬೇಕು, ಯಾವುದೇ ಸಮಸ್ಯೆ ಕಂಡು ಬಂದಲ್ಲಿ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಬೇಕು' ಎಂದು ತಿಳಿಸಿದರು. ಕೃಷಿ ತಾಂತ್ರಿಕ ಸಹಾಯಕ ಪ್ರಜ್ವಲ್ ಕುಮಾರ ಮತ್ತಿತರರು ಉಪಸ್ಥಿತರಿದ್ದರು.

## "ಹುಲಿಗೆಮ್ಮ ದೇವಸ್ಥಾನದ ಬೆಳ್ಳಿ ಆಭರಣಗಳ ಕಳ್ಳತನ"

ನೈಜ್ಯ ದೆಸೆ ನ್ಯೂಸ್

ಪೋತ್ನಾಳ –: ಸಮೀಪದ ಧೋತರಬಂಡಿ ಗ್ರಾಮದ ಬಸ್ ನಿಲ್ದಾಣದ ಎದುರಿಗೆ ಇರುವ ನೂತನ ಹುಲಿಗೆಮ್ಮ ದೇವಿ ದೇವಸ್ಥಾನದ ಬೀಗ ಮುರಿದು ಲಕ್ಷಾಂತರ ರೂಪಾಯಿ ಮೌಲ್ಯದ ದೇವಿಯ ಬೆಳ್ಳಿ ಆಭರಣಗಳು ಹಾಗೂ ಪೂಜಾ ಸಾಮಗ್ರಿಗಳನ್ನು ಸೋಮವಾರ ಬೆಳಗಿನ ಜಾವಾ ಕಳ್ಳರು ದೋಚಿದ ಘಟನೆ ನಡೆದಿದೆ. ಮಧ್ಯ ರಾತ್ರಿ ಅಥವಾ ನಸುಕಿನಲ್ಲಿ ದೇವಸ್ಥಾನದ ಮುಖ್ಯ ಬಾಗಿಲ ಬೀಗ ಮುರಿದು ಒಳನುಗ್ಗಿದ ಕಳ್ಳರು ಗರ್ಭಗುಡಿಯಲ್ಲಿ ದೇವಿಗೆ ಅಲಂಕಾರಸಿದ್ದ 51 ತೊಲೆಯ ಬೆಳ್ಳಿ ಮುಖ ಕವಚ, ಹಸ್ತ ಕವಚಗಳು, 15 ಸಾವಿರ ಬೆಲೆಯ 2 ಮಾಂಗಲ್ಯ ಸರಗಳು, 2 ಲಿಂಗದ ಕಾಯಿಗಳು ಹಾಗೂ ಪೂಜೆಗೆ ಬಳಸುತ್ತಿದ್ದ ತಾಮ್ರದ ಕೊಡ ದೋಚಿ ಪರಾ-



ರಿಯಾಗಿದ್ದಾರೆ.ಸೋಮವಾರ ಮುಂಜಾನೆ ಪೂಜೆ ಸಲ್ಲಿಸಲು ಅರ್ಚಕರು ಬಂದಾಗ ಕಳ್ಳತನದ ವಿಷಯ ಬೆಳಕಿಗೆ ಬಂದಿದೆ. ತಕ್ಷಣವೇ ಈ ಕುರಿತು ಸ್ಥಳೀಯ ಕವಿತಾಳ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದೆ. ಇತ್ತೀಚೆಗೆ ಜಾತ್ರೆ ನಡೆದ ಹಿನ್ನೆಲೆಯಲ್ಲಿ ಕಾಣಿಕೆ ಹುಂಡಿಯನ್ನು ಖಾಲಿ ಮಾಡಲಾಗಿದ್ದ ಪರಿಣಾಮ ಅದನ್ನು ಅಲ್ಲಿಯೇ ಬಿಟ್ಟಿದ್ದಾರೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಘಟನಾ ಸ್ಥಳಕ್ಕೆ ಕವಿತಾಳ ಪೊಲೀಸ್ ಠಾಣೆಯ ಪಿಎಸ್‌ಐ ಗುರುಚಂದ್ರ ಯಾದವ್ ಅವರು ಭೇಟಿ ನೀಡಿ ಕಳ್ಳತನ ಕುರಿತು ಅರ್ಚಕರು ಹಾಗೂ ಗ್ರಾಮಸ್ಥರಿಂದ ಮಾಹಿತಿ ಪಡೆದು ಪರಿಶೀಲನೆ ಮಾಡಿ ಮುಂದಿನ ತನಿಖೆ ಕೈಗೊಂಡಿದ್ದಾರೆ.



## ಭಾರತೀಯ ಸೇನೆ ನಿವೃತ್ತ ಅಧಿಕಾರಿಗೆ ಸನ್ಮಾನ ಸಮಾರಂಭ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಭಾರತೀಯ ಸೇನೆಯ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸೆಎಫ್) ನಲ್ಲಿ ಕಾರ್ಯನಿರ್ವಾಹಕ ಸಹಾಯಕ ಉಪ ನಿರೀಕ್ಷಕರಾಗಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ತಾಯಿನಾಡಿಗೆ ಮರಳುತ್ತಿರುವ ದೇವರ ಹುಲುಗಬಾಳ ಗ್ರಾಮದ ಮೊಹಮ್ಮದ್ ಯೂಸೂಫ ಅಬ್ದುಲಸಾಬ ಹಾದಿಮನಿ ಇವರ ಸ್ವಾಗತ ಹಾಗೂ ಸನ್ಮಾನ ಸಮಾರಂಭ ಜೂನ್ 6 ಶನಿವಾರ ರಂದು ನಡೆಯಲಿದೆ. ಅಂದು ಪಟ್ಟಣದ ಈದ್ಗಾ ಶಾದಿ ಹಾಲ್ ನಲ್ಲಿ ಬೆಳಿಗ್ಗೆ 11:30 ಗಂಟೆಗೆ ನಡೆಯಲಿರುವ ಈ ಸಮಾರಂಭವನ್ನು ಮುದ್ದೇಬಿಹಾಳ ಶಾಸಕ ಹಾಗೂ ಕೆ ಎಸ್ ಡಿ ಎಲ್ ಅಧ್ಯಕ್ಷರಾದ ಸಿ ಎಸ್ ನಾಡಗೌಡ ಅಪ್ಪಾಜಿ ಅವರು ಉದ್ಘಾಟಿಸುವರು. ಜಮಾತೆ ಇಸ್ಲಾಮಿ ಹಿಂದ್ ರಾಜ್ಯ



ಕಾರ್ಯದರ್ಶಿ ಮೊಹಮ್ಮದ್ ಯೂಸೂಫ ಕಣ್ಣಿ ವಿಶೇಷ ಆಹ್ವಾನಿತರಾಗಿರುವರು. ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ ಎಸ್ ಪಾಟೀಲ(ನಡಹಳ್ಳಿ) ಮುಖ್ಯ ಅತಿಥಿಗಳಾಗಿ ಆಗಮಿಸುವರು. ಸಿಎಪಿಎಫ್ ಅಧ್ಯಕ್ಷ ರಾಮನಗೌಡ ಬಿರಾದಾರ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ, ಗೋವಾ ಸ್ವಾತಂತ್ರ್ಯ ಹೋರಾಟಗಾರ ಬಿ ಎಚ್ ಮಾಗಿ, ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿಎಸ್ ಪಾಟೀಲ ಯಾಳಗಿ, ಮುದ್ದೇಬಿಹಾಳ ತಹಸಿಲ್ದಾರ್ ಕೀರ್ತಿ ಚಾಲಕ, ತಾಳಿಕೋಟಿ ತಹಸಿಲ್ದಾರ್ ಡಾ. ವಿನಯಾ ಹೂಗಾರ, ಬಿಇಓ ಬಿ.ಎಸ್.ಸಾವಳಗಿ, ಸಿಪಿಐ ಮೊಹಮ್ಮದ್ ಫಸಿಯುದ್ದೀನ, ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ. ದಮೂರಮಠ,ತಾಳಿಕೋಟಿ ಪಿಎಸೆಐ ಜ್ಯೋತಿ ಕೋತ, ಮುದ್ದೇಬಿಹಾಳ ಪಿಎಸೆಐ ಸಂಜು ತಿಪ್ಪಾರೆಡ್ಡಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆನಂದಗೌಡ ದೊಡಮನಿ, ಬಿಜೆಪಿ ದುರೀಣೆ ಮಂಗಳಾದೇವಿ ಬಿರಾದಾರ,ಜಿ.ಪಂ. ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ರೈತ ಸಂಘ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ ನಡಹಳ್ಳಿ, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ, ಶಿಕ್ಷಕ ಅಶೋಕ ಹಂಚಲಿ, ವಿ.ವಿ.ಸಂಘದ ನಿರ್ದೇಶಕ ಶಂಕರಗೌಡ ಹಿಪ್ಪರಗಿ, ಮುದ್ದೇಬಿಹಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಪ್ಯಾರಾ ಮಿಲಿಟರಿ ನಿವೃತ್ತಿ ಸಂಘ ಅಧ್ಯಕ್ಷ ಅಬ್ದುಲ್ ಜಬ್ಬಾರ ಪಲ್ಲಾನ,ಜ.ಇ.ಹಿಂ. ಅಧ್ಯಕ್ಷ ಮುಜಾಹಿದ್ ನಮಾಜಕಟ್ಟಿ, ಕಾಂಗ್ರೆಸ್ ಮುಖಂಡರಾದ ಸಿ.ಬಿ.ಅಸ್ಕಿ, ಕಾಸಿಂ ಪಟೇಲ ಪಾಟೀಲ,ಇಂಜನೀಯರ ಮುರ್ತುಜಾ ಮೇತ್ರಿ, ಬಸನಗೌಡ ಹಡಲಗೇರಿ ಕೊಣ್ಣೂರ, ಇಮಾಮಸಾಬ ಅವಟಿ, ವಕೀಲ ಏನ್ ಆರ್ ಮೊಕಾಶಿ, ಆಗಮಿಸುವರು. ಸದರಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲ್ಯಾಣ ಕರ್ನಾಟಕ ಹಾಗೂ ಗಣಿ ಭಾದಿತ ಜಿಲ್ಲೆಗಳಿಗೆ ಮೊದಲ ಆದ್ಯತೆ

### ನವಜಾತ ಶಿಶುವಿನಲ್ಲಿ ಚಯಾಪಚಯ ನ್ಯೂನ್ಯತೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಲಾಗುವುದು: ಡಾ.ಸುರೇಂದ್ರ

ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 03 (ಕರ್ನಾಟಕ ವಾರ್ತೆ): ನವಜಾತ ಶಿಶುವಿನಲ್ಲಿ ಜನ್ಮಜಾತ ಚಯಾಪಚಯ ನ್ಯೂನ್ಯತೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚುವುದು ಶಿಶುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅತ್ಯಂತ ಅವಶ್ಯಕವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು. ಜೂನ್ 02ರ ಮಂಗಳವಾರ ದಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ಜನ್ಮಜಾತ ಚಯಾಪಚಯ ನ್ಯೂನ್ಯತೆಗಳನ್ನು ಪತ್ತೆ ಹಚ್ಚುವ ವಿಧಾನಗಳ ಕುರಿತು ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನವಜಾತ ಶಿಶುಗಳಲ್ಲಿ ಆರೋಗ್ಯ ಸ್ಥಿತಿಯ ಜೈವಿಕ ಕ್ರಿಯೆಯಲ್ಲಿ (ಚಯಾಪಚಯ) ಕೆಲವು ಜನ್ಮಜಾತ ದೋಷಗಳನ್ನು ನಿರ್ಲಕ್ಷಿಸಿದರೆ ಮಗುವಿನ ಕುಂಠಿತ ಬೆಳವಣಿಗೆಗೆ ಕಾರಣವಾಗುತ್ತದೆ. ಹೆರಿಗೆ ಸಮಯದಲ್ಲಿ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪ್ರಯೋಗಾಲಯ ಸೇವೆ ಮೂಲಕ ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ಸೌಲಭ್ಯವನ್ನು ಕರ್ನಾಟಕ ಸರಕಾರವು ಕಲ್ಯಾಣ ಕರ್ನಾಟಕ ಹಾಗೂ ಗಣಿ ಭಾದಿತ ಜಿಲ್ಲೆಗಳಿಗೆ ಮೊದಲ ಆದ್ಯತೆ ನೀಡಿ ಆರಂಭಿಸಿದ್ದು, ಮಗುವಿನ ಬೆಳವಣಿಗೆಗೆ ಪೂರಕವಾದ ಈ ಸೌಲಭ್ಯವನ್ನು ಪಡೆಯಲು



ಹೆಚ್ಚು ಜಾಗೃತಿ ಮೂಡಿಸಬೇಕು. ಅಲ್ಲದೆ ಸರ್ಕಾರದ ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಬೇಕೆಂದರು.ಈ ವೇಳೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್. ಎನ್. ಅವರು ಮಾತನಾಡಿ, ಮಗು ಜನಿಸಿದ ತಕ್ಷಣವೇ ಕೈಗೊಳ್ಳುವ ನವಜಾತ ಶಿಶು ತಪಾಸಣೆ ಮೂಲಕ ಈ ದೋಷಗಳನ್ನು ಮೊದಲೇ ಪತ್ತೆ ಹಚ್ಚಬಹುದಾಗಿದೆ. ಥೈರಾಯಿಡ್ ಕಾಯಿಲೆಯನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿದರೆ ನಿರ್ದಿಷ್ಟ ಆಹಾರ ಪದ್ಧತಿ ಮತ್ತು ಔಷಧಿಗಳ ಮೂಲಕ ಮಗುವಿನ ಸಾಮಾನ್ಯ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಬಹುದಾಗಿದೆ. ಆಸ್ಪತ್ರೆಗೆ ಬರುವ ತಾಯಂದಿರು ಪಾಲಕರಿಗೆ ತಮ್ಮ ಮಗುವಿಗೆ ಇಂತಹ ಸಮಸ್ಯೆಗಳ ಬಗ್ಗೆ ಅನುಮಾನವಿದ್ದರೆ, ಕೂಡಲೇ ಸರ್ಕಾರಿ ಆಸ್ಪತ್ರೆಯ ಮಕ್ಕಳ ತಜ್ಞರ ಸಲಹೆಯನ್ನು ಪಡೆಬೇಕೆಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಮಹಮ್ಮದ್ ಶಾಕೀರ್, ಯುಎನ್‌ಡಿಪಿ ರಾಕೇಶ್, ಡಿಪಿಸಿ ಹಾಗೂ ಸಿಪಿಓ ಬಸವರಾಜಪ್ಪಗೌಡ, ಎಮ್‌ಎನ್‌ಡಿ ಜಿಲ್ಲಾ ವ್ಯವಸ್ಥಾಪಕ ಗುರುಗುಪ್ಪಾ ಸೇರಿದಂತೆ ಜಿಲ್ಲೆಯ ವಿವಿಧ ವೈದ್ಯಕೀಯ ಪ್ರಯೋಗ ಶಾಲಾ ತಂತ್ರಜ್ಞರು ತರಬೇತಿ ಕಾರ್ಯಾಗಾರದಲ್ಲಿ ಇದ್ದರು.